

# ಭೃಗುವಾಣಿ

## ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 29 | ಜುಲೈ-ಸೆಪ್ಟೆಂಬರ್ 2016 | ರೂ. 10/- | ಸಂಚಿಕೆ 02



ಸಂಭ್ರಮದ ದುರ್ಗಾ ನಮಸ್ಕಾರ



ಸಡಗರದ ಗಣೇಶೋತ್ಸವ






ಮನರಂಜನಾ ಪ್ರತಿಭಾ ಮೇಳ

**ಗಮನಿಸಿ**

06.11.2016 - ಎ.ಪಿ.ಎಲ್. 2016

25.12.2016 - ಒಂದು ದಿನದ ಪ್ರವಾಸ

08.01.2017 ಆನಂದ ಮಿಲನ 2017

*With best compliments from :*

# TEDMAG
# ENGINEERING & MANAGEMENT
# CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 29 ಸಂಚಿಕೆ 02

**ಅಧ್ಯಕ್ಷರು :**
ಗೀತಾ ವಾಸುದೇವ ರಾವ್

**ಕಾರ್ಯದರ್ಶಿ :**
ಎಸ್. ಹರಿದಾಸ ಉಪಾಧ್ಯ

**ಸಂಪಾದಕರು :**
ಎಂ. ಸತ್ಯನಾರಾಯಣ ಭಟ್

**ಸಂಪಾದಕ ಮಂಡಳಿ :**
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

**ಸಲಹೆಗಾರರು :**
ಶ್ರೀಮತಿ ವಿಜಯಲಕ್ಷ್ಮಿ ಭಟ್

**ಛಾಯಾಚಿತ್ರಗಳು**
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
**ಆನಂದ ಬಳಗ**
ಜೀವನ್ ಬಿಲ್ಡಿಂಗ್
11, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001
ಟೆಲಿಫ್ಯಾಕ್ಸ್ : 41138879

Website:
www.anandabalaga.org



# ಅಧ್ಯಕ್ಷರ ನುಡಿ

ಸಹೃದಯ ಸದಸ್ಯ ಬಂಧುಗಳೇ,

ಆನಂದ ಬಳಗದ ಮಟ್ಟಿಗೆ ಇದೀಗ ಮುಕ್ತಾಯವಾದ ತ್ರೈಮಾಸಿಕ ಅವಧಿಯು ಬಹಳಷ್ಟು ಚಟುವಟಿಕೆಗಳಿಂದ ತುಂಬಿತ್ತು. ಸಾಂಸ್ಕೃತಿಕ ವಿಭಾಗದವರು ಸಂಯೋಜಿಸಿದ್ದ ಮಕ್ಕಳ ಪ್ರತಿಭಾ ಸ್ಪರ್ಧೆ, ಪ್ರತಿಭಾ ಮೇಳ ಹಾಗೂ ಪುರಸ್ಕಾರ, ಧಾರ್ಮಿಕ ವಿಭಾಗ ಹಮ್ಮಿಕೊಂಡಿದ್ದ ದೀಪಾದುರ್ಗಾ ನಮಸ್ಕಾರ ಹಾಗೂ ಯುವ ವಿಭಾಗದ ನೇತೃತ್ವದಲ್ಲಿ ನಡೆದ ಗಣೇಶೋತ್ಸವ ಮತ್ತು ನಿರೂಪಣಾ ಕಾರ್ಯಗಾರ ಈ ಎಲ್ಲಾ ಚಟುವಟಿಕೆಗಳು ಬಳಗದ ಸದಸ್ಯರನ್ನು ಮತ್ತಷ್ಟು ಹತ್ತಿರ ತರುವಲ್ಲಿ ಸಫಲವಾಗಿದೆ. ಈ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಲ್ಲ ಗಣ್ಯರೂ ಆನಂದ ಬಳಗವು ಧಾರ್ಮಿಕ ತಳಹದಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಶ್ಲಾಘಿಸಿರುವುದಲ್ಲದೆ, ಭಗವಂತನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥನೆ ಮಾಡಿದಾಗ ಮಾತ್ರ ನಮ್ಮ ಇಷ್ಟಾರ್ಥ ಸಿದ್ದಿಯಾಗುತ್ತದೆ ಎಂಬ ನಿತ್ಯ ಸತ್ಯವನ್ನು ನೆನಪಿಸಿದ್ದಾರೆ. ಈ ಅಂಶವನ್ನು ಮನುಜರಾದ ನಾವು ಅರಿಯಲೇ ಬೇಕು. ಈ ಸಂದರ್ಭದಲ್ಲಿ ನನಗೆ ಪ್ರಿಯವಾದ ಶುಭಾಳಿ ರಾಗದ ದೇವರ ನಾಮವೊಂದನ್ನು ಉಲ್ಲೇಖಿಸುವುದು ಸಂದರ್ಭೋಚಿತವೆಂದು ನನ್ನ ಅನಿಸಿಕೆ. ಅದು ಹೀಗಿದೆ:

ಅರಿಯರು ಮನುಜರಿಯರು
ಅರಿಯರು ಮನುಜರು ಅರಿತೂ ಅರಿಯರು
ಧರೆಯೀ ಏಳಕೆ ಹರಿಯಲ್ಲ ದಿಲ್ಲವೆಂದು ॥

ನಾರದ ಮುನಿ ಬಲ್ಲ ವಾರಿಜೋದ್ಭವ ಬಲ್ಲ
ಪಾರಾಶರ ಬಲ್ಲ ಮನು ಬಲ್ಲನೊ
ಧೀರ ಭೀಷ್ಮನು ಬಲ್ಲ ಪಾರ್ವತಿ ಬಲ್ಲಳೊ
ಕಾರುಣಿಕನು ಶ್ರೀಹರಿಯಲ್ಲ ದಿಲ್ಲವೆಂದು ॥

ಶಿವ ಬಲ್ಲ ಧ್ರುವಬಲ್ಲ ದ್ರೌಪದಿ ಬಲ್ಲಳೊ
ಅವನಿ ಪಾಲಕ ಜನಕ ನೃಪ ಬಲ್ಲನೊ
ಯುವತಿಗೆ ಶಾಪವಿಟ್ಟ ಗೌತಮ ಮುನಿ ಬಲ್ಲ
ಭವರೋಗ ವೈದ್ಯ ಶ್ರೀ ಹರಿಯಲ್ಲ ದಿಲ್ಲವೆಂದು॥

ದಿಟ್ಟ ಪ್ರಹ್ಲಾದ ಬಲ್ಲ, ಕೆಟ್ಟ ಅಜಮಿಳ ಬಲ್ಲ
ಸಿಟ್ಟಿನಿಂದಲಿ ಒದ್ದ ಭೃಗು ಬಲ್ಲನೊ
ಕೊಟ್ಟ ಬಲಿ ಬಲ್ಲ ಮೊರೆಯಿಟ್ಟ ಗಜೇಂದ್ರ ಬಲ್ಲ
ಸೃಷ್ಟೀಶ ಪುರಂದರ ವಿಠಲನೇ ದೈವವೆಂದು ॥

ಈ ದೇವರ ನಾಮದ ಅಂತರಾರ್ಥವನ್ನು ತಿಳಿದು ಬದುಕಿದರೆ ನಮಗೂ ಯಶಸ್ಸು, ಸಮಾಜಕ್ಕೂ ಒಳಿತು. ಮುಂಬರುವ ದೀಪಾವಳಿ ಸಂದರ್ಭದಲ್ಲಿ, ತಮಗೆಲ್ಲಾ ಹಾರ್ದಿಕ ಶುಭಾಶಯಗಳು.

ಗೀತಾ ವಾಸುದೇವರಾವ್

## Executive Committee Members : 2016-2018

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Treasurer*** | |
| Y. Radhakrishna | 98440 58851 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| P.N. Vishnumurthy Kuddannaya | 94803 05426 |
| ***Convener, Youth Wing*** | |
| M. Dinesh Rao | 99456 88955 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| Y. Jayantha Rao | 94482 74519 |
| ***Convener, Membership Devt. Wing*** | |
| M.K. Gurumurthy | 98440 22692 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Geetha P.R. Rao | 99459 38411 |
| K.N. Adiga | 94488 48154 |
| Kasturi Aithal | 98803 98353 |
| P.C. Rao | 98444 94630 |
| A. Sandeep Rao | 98450 98150 |
| ***Co-opted Members*** | |
| T.S. Nagaraja Upadhyaya | 93412 26763 |
| Jayaprakash Mady | 98450 09669 |
| B.S. Balachandra Tolpadi | |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| Padubidri Raghavendra Rao | 2287 2705 |
| UAP Ballal | 2226 7609 |
| STR Madi | 99029 77948 |
| KVM Yerkadithya | 2663 1994 |
| ***Special Invitees*** | |
| P. Ramadas | 98450 25896 |
| N.R. Narayana Rao | 2239 1380 |
| M. Mohan Rao | 98453 79956 |
| M. Bhaskar Rao | 2669 5752 |
| Sudha M Rao | 99011 27738 |
| U V Krishna Murthy | 2361 1133 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| S. Harish | 94484 97444 |

## ಒಳಪುಟಗಳಲ್ಲಿ . . .


| | |
|---|---|
| ಅಧ್ಯಕ್ಷರ ನುಡಿ | 1 |
| ವಿಜೃಂಭಣೆಯಿಂದ ನಡೆದ ದುರ್ಗಾ ನಮಸ್ಕಾರ | 3 |
| ಯುವ ವಿಭಾಗದಿಂದ ನಿರೂಪಣಾ ಕಾರ್ಯ್ಯಾಕಾರ | 4 |
| ಆನಂದ ಬಳಗದ ಸರ್ವಸದಸ್ಯರ ವಾರ್ಷಿಕ ಮಹಾಸಭೆ | 5 |
| ಸಂಭ್ರಮದ ಗಣೇಶೋತ್ಸವ | 7 |
| ಮಕ್ಕಳ ಪ್ರತಿಭಾ ಪ್ರದರ್ಶನ ಮತ್ತು ಪುರಸ್ಕಾರ | 8 |
| ಯುವ ವಿಭಾಗದಿಂದ ಕೌನ್ಸಿಲಿಂಗ್ ಮತ್ತು ವೇದಪಾಠ ಶಿಬಿರ | 12 |
| ಕರಾವಳಿ ಯಕ್ಷಗಾನ ಕಲಾವಿದರ 32ನೇ ವಾರ್ಷಿಕೋತ್ಸವ | 12 |
| ಗೋಡೆ ಗಡಿಯಾರ | 13 |
| ವೈಚಾರಿಕ ಲೇಖನ - ಹಬ್ಬದಿಂದ ಶುಭಸಂಸ್ಕಾರ | 15 |
| ಶ್ರೀಶ್ರೀ ವಿಶ್ವಜ್ಞತೀರ್ಥರ ಆರಾಧನಾ ಮಹೋತ್ಸವ | 17 |
| ಶ್ರೀಶ್ರೀ ವಿದಾಧೀಶರ 135ನೇ ಆರಾಧನಾ ಮಹೋತ್ಸವ | 18 |
| ಆರೋಗ್ಯ-ಕಾಳಜಿ 1 - ಉಪ್ಪು ಮತ್ತು ಆರೋಗ್ಯ | 19 |
| ನಾನು ಬರಮಾಡಿಕೊಂಡ ಭಾರತದ ಸ್ವಾತಂತ್ರ್ಯ | 21 |
| ಕವನಗಳು | 23 |
| ಸುದ್ದಿ ಸಂಗ್ರಹ | 27 |


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹಾ ಸಂಪಾದಕ ಮಂಡಳಿಯದಲ್ಲ.

### ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :

**ಎಂ. ಸತ್ಯನಾರಾಯಣ ಭಟ್**
''ಕೃಷ್ಣಕೃಪಾ'', 12/1, 5ನೇ ಮೈನ್, ಇಟ್ಟುಮಡು,
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085
E-mail: msbhat1958@gmail.com

# ವಿಜೃಂಭಣೆಯಿಂದ ನಡೆದ ದುರ್ಗಾ ನಮಸ್ಕಾರ



ಪೂಜಾರಂಭದಲ್ಲಿ ಸಂಕಲ್ಪ

ಬೆಂಗಳೂರಿನ ಜನರಿಗೆ ಅಪರೂಪದಲ್ಲಿ ನೋಡಲು ಸಿಗುವ ದೀಪ ದುರ್ಗಾ ನಮಸ್ಕಾರವನ್ನು ಆನಂದ ಬಳಗದ ಧಾರ್ಮಿಕ ವಿಭಾಗವು ಪ್ರತಿವರ್ಷವೂ ನಡೆಸುತ್ತಾ ಬಂದಿದೆ. ಈ ವರ್ಷದ ದುರ್ಗಾ ನಮಸ್ಕಾರವನ್ನು ದಿನಾಂಕ 15-8-2016ರ ಸೋಮವಾರ ಬನ್ನೇರು ಘಟ್ಟ ರಸ್ತೆಯಲ್ಲಿರುವ ಆನಂದ ಸಭಾಗೃಹದಲ್ಲಿ ಸಂಯೋಜಿಸಲಾಗಿತ್ತು. ಸಂಜೆ 4 ರಿಂದಲೇ ವಿದ್ಯಾಪೀಠದ ವಿದ್ವಾಂಸರಾದ ಶ್ರೀ ವಿಷ್ಣುಮೂರ್ತಿ ಸರಳಾಯರ ಪ್ರಧಾನ ಪೌರೋಹಿತ್ಯದಲ್ಲಿ ಪೂಜೆಗೆ ವಿಶೇಷವಾದ ಮಂಡಲ ಹಾಕುವ ಕಾರ್ಯ ಆರಂಭವಾಗಿದ್ದು, ಸುಮಾರು 7 ಘಂಟೆಗೆ ಮಹಾ ಮಂಗಳಾರತಿ ಆಯಿತು ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಶ್ರೀಮತಿ ವಂದನಾ ಮೂರ್ತಿಯವರು ಪ್ರಧಾನ ಕರ್ತೃಗಳಾಗಿದ್ದರು.

ಬಳಗದ ಉತ್ಸಾಹೀ ಸದಸ್ಯರು ಮುತುವರ್ಜಿಯಿಂದ ರಚಿಸಿದ್ದ ಆಕರ್ಷಕ ಮಂಟಪ, ಅದಕ್ಕೆ ಇನ್ನೂ ಮೆರುಗು ನೀಡಿದ ಬಣ್ಣದ ರಂಗೋಲಿ, ಮಂಟಪದ ಮಧ್ಯೆ ದೇವಿಗೆ ಪ್ರಿಯವಾದ ಕೇಪಳ ಹೂ ಹಾಗೂ ಇನ್ನಿತರ ಹೂಗಳಿಂದ ಸರ್ವಾಲಂಕಾರಗೊಂಡ ದೀಪದಲ್ಲಿ ಆವಾಹನೆಗೊಂಡ ದುರ್ಗಾಮಾತೆಯನ್ನು ಭಕ್ತಾಭಿಮಾನಿಗಳು ಕಣ್ತುಂಬಿಸಿಕೊಂಡರು. ಶ್ರೀ ನರ್ಸಪಯ್ಯ ಮತ್ತು ತಂಡದವರ ಚೆಂಡೆ ವಾದನ ಮಂಗಳಾರತಿ ಸಂದರ್ಭದ ಸಡಗರವನ್ನು ಮತ್ತಷ್ಟು ಹೆಚ್ಚಿಸಿತು.

ದುರ್ಗಾ ನಮಸ್ಕಾರದ ಸಂದರ್ಭದಲ್ಲಿ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀ ಪಾದರು ಆಗಮಿಸಿ, ಶ್ರೀಕೃಷ್ಣನಿಗೆ ತೊಟ್ಟಿಲು ಪೂಜೆ ಸೇವೆಯನ್ನು ಮಾಡಿರುವುದು ಈ ವರ್ಷದ ವಿಶೇಷ. ಈ ಪರ್ವಕಾಲದಲ್ಲಿ ಅನುಗ್ರಹ ಸಂದೇಶ ನೀಡಿದ ಪೂಜ್ಯ ಶ್ರೀಪಾದರು ಕಲಿಯುಗದಲ್ಲಿ ದುರ್ಗಾ ಆರಾಧನೆಯ ಮಹತ್ವವನ್ನು ಸ್ವಾರಸ್ಯಕರವಾಗಿ ವಿವರಿಸಿದರು. ಆನಂದಬಳಗವು ಧಾರ್ಮಿಕ ತಳಹದಿಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಇದರಿಂದಾಗಿಯೇ ಕಳೆದ 27 ವರ್ಷಗಳಲ್ಲಿ ಬಳಗ ಏಕ ಪ್ರಕಾರವಾಗಿ ಪ್ರವರ್ಧಮಾನಕ್ಕೆ ಬರಲು



ತೊಟ್ಟಿಲು ಪೂಜೆಯಲ್ಲಿ ಪೂಜ್ಯ ಪುತ್ತಿಗೆ ಶ್ರೀಗಳಿಂದ ಚಾಮರ ಸೇವೆ

ಸಾಧ್ಯವಾಯಿತು ಎಂದು ತಿಳಿಸಿದ ಪೂಜ್ಯ ಶ್ರೀಪಾದರು ಬಳಗವು ಇನ್ನಷ್ಟು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತಾಗಲಿ. ಇದರಿಂದ ನಮ್ಮ ಜನರ ಧಾರ್ಮಿಕ ಪ್ರಜ್ಞೆ ಜಾಸ್ತಿಯಾಗುವಂತಾಗಲಿ ಎಂದು ಆಶೀರ್ವದಿಸಿದರು. ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವ ರಾವ್‌ರವರು ಪೂಜ್ಯ ಶ್ರೀಗಳಿಗೆ ಫಲ ಕಾಣಿಗೆ ನೀಡಿ ಗೌರವಿಸಿದರು. ಸುಮಾರು 600–700ರ ಮೇಲ್ಪಟ್ಟು ಸದಸ್ಯರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಗಮನಾರ್ಹ.

ಕಲಿಯುಗದಲ್ಲಿ ಕ್ಷಿಪ್ರವಾಗಿ ಫಲವನ್ನು ನೀಡುವ ದುರ್ಗಾ ಮಾತೆಯ ಈ ಆರಾಧನಾಕಾರ್ಯದಲ್ಲಿ ಬಳಗದ ಸದಸ್ಯರು ಸೇವಾ ಕಾಣಿಕೆ ನೀಡುವುದರ ಮೂಲಕ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಮೊದಲಿಗೆ ಸೇವಾ ಸಂಕಲ್ಪ ಮಾಡುವ ಅವಕಾಶವನ್ನು ಕಲ್ಪಿಸಲಾಗಿದ್ದು, ಪೂಜಾ ನಂತರ ವಿಶೇಷ ಫಲ–ಪುಷ್ಪ ಪ್ರಸಾದವನ್ನು ನೀಡಲಾಯಿತು.

ಸಾಮಾನ್ಯವಾಗಿ ಆನಂದ ಸಭಾಗೃಹದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಸದಸ್ಯರ ಸಂಖ್ಯೆ ಕಡಿಮೆ ಇರುತ್ತದೆ ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಸದಸ್ಯರು ಸುಳ್ಳು ಮಾಡಿದ್ದಾರೆ. ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸಿ, ಯಶಸ್ವಿಗೊಳಿಸಿ ರುವುದಕ್ಕೆ ಸದಸ್ಯರನ್ನು ಅಭಿನಂದಿಸಲೇ ಬೇಕು. ಜೊತೆಗೆ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ ಮತ್ತು ಅವರ ಕ್ರಿಯಾಶೀಲ ಕಾರ್ಯತಂಡವು ಈ ಧಾರ್ಮಿಕ ಕಾರ್ಯಕ್ರಮದ ಯಶಸ್ಸಿಗಾಗಿ ತೋರಿದ ವಿಶೇಷ ಆಸಕ್ತಿ, ಮುತುವರ್ಜಿ ಹಾಗೂ ಪಟ್ಟ ಶ್ರಮವೂ ಶ್ಲಾಘನೀಯ.

❀

# ಯುವ ವಿಭಾಗದಿಂದ ನಿರೂಪಣಾ ಕಾರ್ಯಾಗಾರ


ಕಾರ್ಯಾಗಾರದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಮತ್ತು ಪರಿಣತರು

ಯುವ ವಿಭಾಗವು ಶ್ರೀ ಎಂ. ದಿನೇಶ್‌ರಾವ್‌ರವರ ಸಂಚಾಲಕತ್ವದಲ್ಲಿ ಕೆಲವಾರು ವಿನೂತನ ಕಾರ್ಯಕ್ರಮಗಳನ್ನು ಯೋಜಿಸಿದ್ದು, ಈ ಮಾಲಿಕೆಯ ಮೊದಲ ಕಾರ್ಯಕ್ರಮವಾಗಿ ನಿರೂಪಣಾ ಕಾರ್ಯಾಗಾರವನ್ನು ದಿನಾಂಕ 28.8.2016 ರಂದು ಸಂಯೋಜಿಸಲಾಗಿತ್ತು. ಶಿವಾಜಿನಗರದ ಆದಿತ್ಯ ಟವರ್ಸ್‌ನಲ್ಲಿರುವ ಬಳಗದ ಸಕ್ರಿಯ ಸದಸ್ಯರು ಹಾಗೂ ಪೋಷಕರಾದ ಶ್ರೀ ಎಂ.ಕೆ. ಪ್ರಸಾದ್‌ರವರ ಕಚೇರಿಯ ಸಭಾಂಗಣದಲ್ಲಿ ನಡೆದ ಈ ಕಾರ್ಯಾಗಾರವನ್ನು ಗಾರ್ಡನ್ ಸಿಟಿ ಟೋಸ್ಟ್ ಮಾಸ್ಟರ್ ಕ್ಲಬ್‌ನ ಮಾಜಿ ಅಧ್ಯಕ್ಷರಾದ ಶ್ರೀ ರಾಮಲಾಲ್ ಹಾಗೂ ಬಳಗದ ಕಾರ್ಯದರ್ಶಿ ಶ್ರೀ ಎಸ್. ಹರಿದಾಸ್ ಉಪಾಧ್ಯರವರು ಉದ್ಘಾಟಿಸಿದರು. ಶ್ರೀ ವಿನ್ಯಾಸಮೂರ್ತಿ ಪ್ರಾರ್ಥನೆ ಮಾಡಿದರೆ, ಶ್ರೀ ದಿನೇಶ್‌ರಾವ್‌ಎಲ್ಲರನ್ನೂ ಸ್ವಾಗತಿಸಿದರು. ಪೂರ್ವಾಹ್ನ 10 ರಿಂದ ಸಂಜೆ 5ರವರೆಗೆ ನಡೆದ ಕಾರ್ಯಾಗಾರದಲ್ಲಿ ಶ್ರೀ ರಾಮಲಾಲ್, ಶ್ರೀ ಎಂ.ಕೆ. ಪ್ರಸಾದ್, ಡಾ (ಶ್ರೀಮತಿ) ವೀಣಾ ಶರತ್ ಹಾಗೂ ಶ್ರೀ ಕೆ.ಎನ್. ಅಡಿಗರವರು ಪರಿಣತ ಮಾರ್ಗದರ್ಶಕರಾಗಿ ಸಹಕರಿಸಿದರೆ, ಶ್ರೀ ಎಂ. ಸತ್ಯನಾರಾಯಣ ಭಟ್‌ರವರು ಇಡಿ ದಿನದ ನಿರೂಪಣೆಯ ಜವಾಬ್ದಾರಿಯನ್ನು ನಿರ್ವಹಿಸಿದರು. ಪೂರ್ವಾಹ್ನ ಸಮಾವೇಶದಲ್ಲಿ ಶ್ರೀ ರಾಮಲಾಲ್‌ರವರು ನಿರೂಪಣೆಯ ಮಹತ್ವದ ಬಗ್ಗೆ ತಿಳಿಸಿದರೆ ಶ್ರೀ ಎಂ.ಕೆ. ಪ್ರಸಾದ್ ನಿರೂಪಣೆಯ ಮೂಲ ತತ್ವಗಳ ಬಗ್ಗೆ ವಿವರಿಸಿದರು. ಡಾ. ವೀಣಾ ಶರತ್‌ರವರು ನಿರೂಪಣೆಯ ಸೊಬಗನ್ನು ಹೆಚ್ಚಿಸುವ ಅಗತ್ಯ ಮತ್ತು ವಿಧಾನಗಳ ಬಗ್ಗೆ ತಮ್ಮ ಅನುಭವ ಪೂರ್ಣ ಮಾರ್ಗದರ್ಶನ ನೀಡಿದರೆ ಶ್ರೀ ಕೆ.ಎನ್. ಅಡಿಗರು ನಿರೂಪಕನ ಜವಾಬ್ದಾರಿ ಮತ್ತು ನಿರ್ವಹಣೆಯ ಚಾಣಾಕ್ಷತನದ ಬಗ್ಗೆ ವಿವರಿಸಿದರು. ಅಪರಾಹ್ನದ ಪ್ರಾಕ್ಟಿಕಲ್ ಸಮಾವೇಶದಲ್ಲಿ ಎಲ್ಲಾ ಅಭ್ಯರ್ಥಿಗಳು ವಿವಿಧ ಸಂದರ್ಭದ ಸಮಾರಂಭಗಳಲ್ಲಿ ನಿರೂಪಣೆ ಮಾಡುವ ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿತ್ತು. ಶ್ರೀ ಶ್ರೀಶ ಬಲ್ಲಾಳ್‌ರವರು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಸುಮಾರು 30 ಅಭ್ಯರ್ಥಿಗಳು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದು, ಇಂತಹ ಯತ್ತಮ ಪ್ರಯತ್ನಕ್ಕಾಗಿ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್ ಹಾಗೂ ಹೆಚ್ಚಿನ ಮುತುವರ್ಜಿ ತೋರಿದ ಶ್ರೀ ಎಂ.ಕೆ. ಪ್ರಸಾದ್ ಅಭಿನಂದನಾರ್ಹರು.

# ಆನಂದ ಬಳಗದ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಆನಂದ ಬಳಗದ 2015–16ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 18.9.2016 ರಂದು ಹೋಟೆಲ್ ಅಜಂತಾ ಆವರಣದಲ್ಲಿ ನಡೆಯಿತು. ಅಂದು ಪೂರ್ವಾಹ್ನ ಬೆಳಿಗ್ಗೆ 10.30 ಘಂಟೆಗೆ ಅಧ್ಯಕ್ಷರಾದ ಶ್ರೀಮತಿ ಗೀತಾವಾಸುದೇವ ರಾವ್‌ರವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯು ಶ್ರೀ ಬಿ.ಆರ್. ತಂತ್ರಿಯುವರು ಹಾಡಿದ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಬಂದಿರುವ ಸದಸ್ಯರನ್ನು ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ಸ್ವಾಗತಿಸಿದರು. 2015–16ನೇ ಸಾಲಿನಲ್ಲಿ ನಮ್ಮನ್ನಗಲಿದ ಬಂಧುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ ಬಳಿಕ, ಕಳೆದ ವಾರ್ಷಿಕ ಮಹಾಸಭೆಯ ವರದಿಯನ್ನು ಶ್ರೀ ಎಂ.ಕೆ. ಗುರುಮೂರ್ತಿಯವರು ವಾಚಿಸಿದರು. ಈ ವರ್ಷದ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಎಸ್. ಹರಿದಾಸ ಉಪಾಧ್ಯ ಸಭೆಯ ಮುಂದಿಟ್ಟರೆ, ಪರಿಶೋಧಿತ ಲೆಕ್ಕ ಪತ್ರಗಳನ್ನು ಕೋಶಾಧಿಕಾರಿ ಶ್ರೀ ವೈ. ರಾಧಾಕೃಷ್ಣ ಮಂಡಿಸಿದರು. ಸಂಕ್ಷಿಪ್ತ ವಿಚಾರ–ವಿನಿಮಯದ ನಂತರ ವರದಿ ಮತ್ತು ಲೆಕ್ಕ ಪತ್ರಗಳನ್ನು ಸಭೆಯು ಅನುಮೋದಿಸಿತು. 2016–17ನೇ ಸಾಲಿಗೆ ಜಿ.ವಿ. ಆಚಾರ್ಯ ಎಂಡ್ ಕಂಪೆನಿ ಅವರನ್ನೇ ಲೆಕ್ಕಪತ್ರ ಪರಿಶೋಧಕರಾಗಿ ಮುಂದುವರಿಸುವ ಬಗ್ಗೆ ಸಭೆಯು ಸರ್ವಾನುಮತದಿಂದ ನಿರ್ಧರಿಸಿತು. ಸಭಾಧ್ಯಕ್ಷತೆ ವಹಿಸಿದ ಶ್ರೀಮತಿ ಗೀತಾವಾಸುದೇವರಾವ್ ರವರು ಬಳಗದ ಎಲ್ಲಾ ಚಟುವಟಿಕೆಗಳಲ್ಲಿ ಸಹಕರಿಸುತ್ತಿರುವ ವಿವಿಧ ಉಪಸಮಿತಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಗೂ ಸರ್ವಸದಸ್ಯರನ್ನು ಅಭಿನಂದಿಸಿದರು. ಮುಂದೆಯೂ ಇದೇ ರೀತಿಯ ಬೆಂಬಲವನ್ನು ನೀಡುವಂತೆ ಕೋರಿದರು. ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ವಂದನಾರ್ಪಣೆ ಮಾಡಿದರು. ಅಜಂತಾ ಹೋಟೆಲ್‌ನ ಸೌಜನ್ಯದಿಂದ ಸದಸ್ಯರಿಗೆ ಭರ್ಜರಿ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.

---

## ಆನಂದ ಮಿಲನ 2017 : ದಿನಾಂಕ 8.01.2017

ಗಮನಿಸಿ! ಭಾಗವಹಿಸಿ!!

ಆನಂದ ಬಳಗದ ಯುವ ವಿಭಾಗದ ನೇತೃತ್ವದಲ್ಲಿ


## ಆನಂದ ಮಿಲನ – 2017

ದಿನಾಂಕ 08.01.2017ರ ಭಾನುವಾರ

ಸಂಜೆ 4.00 ರಿಂದ ವೈವಿಧ್ಯಮಯವಾಗಿ ನಡೆಯಲಿದೆ

ಸ್ಥಳ : **ದಿ ಬೆಲ್ ಹೋಟೆಲ್**

ಸಿಟಿ ರೈಲ್ವೇ ಸ್ಟೇಷನ್ ಹತ್ತಿರ, ಬೆಂಗಳೂರು – 560 023



ಸಂತಸ, ಮೋಜು, ಮನರಂಜನೆ, ತಿಂಡಿ, ತಿನಿಸು, ಭೋಜನ, ತಮಾಷೆಯ ಸ್ಪರ್ಧೆಗಳು, ಸಂಗೀತ, ನೃತ್ಯ, ಅಭಿನಯ..... ಹೀಗೆ ಎಲ್ಲದರ ಸಮ್ಮಿಶ್ರಣದ ಮೂಲಕ ಸದಸ್ಯರ ಮನರಂಜಿಸಲಿರುವ ಈ ಮಿಲನದ ಬಗ್ಗೆ ಹೆಚ್ಚಿನ ವಿವರಗಳನ್ನು ಆನಂದ ಬಳಗದ ವೈಬ್‌ಸೈಟ್ anandabalaga.orgನಲ್ಲಿ ಪ್ರಕಟಿಸಲಾಗುವುದು.

ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಕ್ರಿಯವಾಗಿ ಪಾಲ್ಗೊಂಡು ಆನಂದ ಮಿಲನವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

– ದಿನೇಶ್ ರಾವ್ .ಎಂ

ಸಂಚಾಲಕರು, ಯುವವಿಭಾಗ

With Best Compliments From :

**FOR DAKSHINA KARNATAKA**
**BRAHMIN COMMUNITY**

**GLOBAL INTRERACTIVE MATRIMONIAL WEBSITE**

LOG ON TO www.dkbmatrimony.com

WITH FEATURES LIKE

PHOTO & HOROSCOPE UPLOADING
AND HOROSCOPE MATCHING

Contact :
**Manjunath Bhat**
(M) 09822114009,
Pune

With Best Compliments From :

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

# ಸಂಭ್ರಮದ ಗಣೇಶೋತ್ಸವ

ಆನಂದ ಬಳಗದ ಯುವ ವಿಭಾಗದ ನೇತೃತ್ವದಲ್ಲಿ ಗಣೇಶೋತ್ಸವ ದಿನಾಂಕ 11.09.2016ರ ಭಾನುವಾರ ದಂದು ಆನಂದ ಸಭಾಗೃಹದ ಸಭಾಂಗಣದಲ್ಲಿ ನಡೆದಿರುತ್ತದೆ. ಬೆಳಿಗ್ಗೆ 9.30 ಗಂಟೆಗೆ ಶ್ರೀಯುತ ಶ್ರೀವತ್ಸ ಆಚಾರ್ಯರ ಪೌರೋಹಿತ್ಯದಲ್ಲಿ ಷಟ್‌ನಾರಿಕೇಳ ಗಣಹೋಮ ನಡೆದು 11.00 ಘಂಟೆಗೆ ಪೂರ್ಣಾಹುತಿ




**ಗಣೇಶನಿಗೆ ನೃತ್ಯ ನಮನ**

ಮಾಡಲಾಯಿತು, ನಂತರ ಗಣೇಶನ ವಿಗ್ರಹ ಪ್ರತಿಷ್ಠಾಪನೆ ಮಾಡಿ, ಬಳಗದ ಸದಸ್ಯರೆಲ್ಲರೂ ಸೇರಿ ವಿಷ್ಣು ಸಹಸ್ರನಾಮವನ್ನು ಪಠಿಸಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಪಿ.ಎಸ್. ಬಾಲಕೃಷ್ಣ ಮತ್ತು ಶ್ರೀಮತಿ ಪೂರ್ಣಿಮಾರವರ ಸುಪುತ್ರಿಯವರಾದ ಕುಮಾರಿ ಅಂಕಿತ ಪಿ.ಬಿ. ಹಾಗೂ ಅಲಂಕೃತ ಪಿ.ಬಿ.ರವರ ಭರತನಾಟ್ಯ ಹಾಗೂ ಸಂಗೀತ ಕಾರ್ಯಕ್ರಮ ಎಲ್ಲರ ಕಣ್‌ಮನ ಸೆಳೆಯಿತು.

ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ವಿನ್ಯಾಸಮೂರ್ತಿ ಮಾಡಿದರು. ಕಾರ್ಯಕ್ರಮ ಕು. ವರ್ಷಾ ಮೂರ್ತಿಯವರ ಇಂಪಾದ ಗಣೇಶನ ಸ್ತುತಿಯೊಂದಿಗೆ ಪ್ರಾರಂಭವಾಯಿತು. ಯುವ ವಿಭಾಗದ ಅಧ್ಯಕ್ಷರಾದ ಶ್ರೀ ದಿನೇಶ್ ರಾವ್ ಎಂ. ಸ್ವಾಗತ ಭಾಷಣ ಮಾಡಿ ಯುವ ವಿಭಾಗದ ಧ್ಯೇಯೋದ್ದೇಶಗಳ ಬಗ್ಗೆ ಪರಿಚಯವಿತ್ತರು, ಹಾಗೂ ಇತ್ತೀಚೆಗೆ ಯುವ ವಿಭಾಗದ ವತಿಯಿಂದ ನೆರವೇರಿದ ಆನಂದ ಉದ್ಯೋಗ ಹಾಗೂ ನಿರೂಪಣಾ ಕಾರ್ಯಗಾರದ ಯಶಸ್ಸನ್ನು ವಿವರಿಸಿದರು. ಇನ್ನು ಮುಂದೆ ನಡೆಯಲಿರುವ ಕಾರ್ಯಕ್ರಮಗಳಾದ ಕೌನ್ಸೆಲಿಂಗ್ ಮತ್ತು ವೇದಪಾಠ ಮಾತ್ತು ಸಂಸಕೃತ ಶಿಬಿರದ ಬಗ್ಗೆಯೂ ಸಭಿಕರಿಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಯವರನ್ನು ಶ್ರೀಮತಿ ಸೌಮ್ಯ ಕೆ.ವಿ. ಯವರು ಸಭೇಗೆ ಪರಿಚಯಿಸಿದರು. ಬಳಿಕ ಖ್ಯಾತ ವಿದ್ವಾಂಸರಾದ ಶ್ರೀ ಕೃಷ್ಣರಾಜ ಕುತ್ಪಾಡಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಬಳಗದ ಕಾರ್ಯಕ್ರಮದ ಬಗ್ಗೆ ಹೆಮ್ಮೆಯ ಮಾತನಾಡಿ, ನವ ಪೀಳಿಗೆಗೆ ನಮ್ಮ ಸಂಪ್ರದಾಯದ ಇಂತಹ ಕಾರ್ಯಕ್ರಮಗಳನ್ನು ನೆರವೇರಿಸಿ ಅರಿವು ಮೂಡಿಸುವಂತೆ ಮಾಡುವ ಆನಂದ ಬಳಗದ ಕಾರ್ಯ ಶ್ಲಾಘನೀಯ ಎಂದರು. ಮುಖ್ಯ ಅತಿಥಿಗಳಿಗೆ ಗೌರವಾರ್ಪಣೆಯನ್ನು ಶ್ರೀಮತಿ ಗೀತಾ ವಾಸುದೇವರಾವ್, ಆನಂದ ಬಳಗದ ಅಧ್ಯಕ್ಷೆಯವರು ನೆರವೇರಿಸಿದರು.

ಅಧ್ಯಕ್ಷರಾದ ಶ್ರೀಮತಿ ಗೀತಾವಾಸುದೇವ ರಾವ್ ಅವರು ಯುವ ವಿಭಾಗದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸಿದರು. ಆನಂದ ಬಳಗದ ಸದಸ್ಯರೆಲ್ಲರಿಗೂ ಗಣೇಶೋತ್ಸವದ ಸಂದರ್ಭದಲ್ಲಿ ಶುಭ ಹಾರೈಸುತ್ತ ಇನ್ನು ಮುಂದೆಯೂ ಇಂತಹ ಕಾರ್ಯಕ್ರಮಗಳು ನಡೆಯಲಿ ಹಾಗೂ ಎಲ್ಲರೂ ಭಾಗವಹಿಸಬೇಕೆಂದು ಹೇಳಿದರು.



**ಮುಖ್ಯ ಅತಿಥಿಗಳಿಗೆ ಗೌರವಾರ್ಪಣೆ**

ಕೊನೆಯದಾಗಿ ಶ್ರೀ ಶ್ರೀಶಬಲ್ಲಾಳ, ಯುವ ವಿಭಾಗದ ಖಜಾಂಚಿಯುವರು ವಂದನಾರ್ಪಣೆ ಮಾಡಿದರು. ನಂತರ ಚಂಡೆವಾದನದೊಂದಿಗೆ ಮಂಗಳಾರತಿಯಾದ ಬಳಿಕ ಪ್ರಸಾದ ವಿತರಣೆ ಮಾಡಿ ಭೋಜನವಾಯಿತು. ಮೆರವಣಿಗೆಯೊಂದಿಗೆ ಗಣೇಶ ವಿಗ್ರಹದ ವಿಸರ್ಜನೆಯಾಯಿತು.

– ಅಮಿತ ದಿನೇಶ್‌ರಾವ್ .ಎಮ್

# ಮಕ್ಕಳ ಪ್ರತಿಭಾ ಪ್ರದರ್ಶನ ಮತ್ತು ಪುರಸ್ಕಾರ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿ ಕೊಂಡಿರುವ ನಮ್ಮ ಆನಂದ ಬಳಗ ಸಾಂಸ್ಕೃತಿಕ ಕ್ಷೇತ್ರದಲ್ಲೂ ಹಲವು ಚಟುವಟಿಕೆಗಳ ಮೂಲಕ ಸೇವೆ ಸಲ್ಲಿಸುತ್ತಿರುವುದು ನಾವೆಲ್ಲಾ ಹೆಮ್ಮೆ ಪಡುವ ವಿಷಯ. ಅದೂ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಬಲವಾದ ನಂಬಿಕೆಯ ಮೇಲೆ ಮಕ್ಕಳಿಗಾಗಿಯೇ ಪ್ರತಿಭಾ ಸ್ಪರ್ಧೆ, ಪ್ರದರ್ಶನ ಹಾಗೂ ಪುರಸ್ಕಾರ ಬಳಗದ ಸದಸ್ಯರನ್ನು ಯಾವಾಗಲೂ ಹೆಚ್ಚು ಹೆಚ್ಚಾಗಿ ಆಕರ್ಷಿಸುವ ಕಾರ್ಯಕ್ರಮಗಳಲ್ಲೊಂದು.

ವಿವಿಧ ಸ್ಪರ್ಧೆಗಳನ್ನೊಳಗೊಂಡ ಈ ಬಾರಿಯ ಮಕ್ಕಳ ಪ್ರತಿಭಾ ಸ್ಪರ್ಧೆ ಜುಲೈ 10 ರಂದು ಹೋಟೆಲ್ ಅಜಂತಾದ ಆಶ್ರಯದಲ್ಲಿ ಯಶಸ್ವಿಯಾಗಿ ನಡೆಯಿತು. (ಸ್ಪರ್ಧೆಯಲ್ಲಿ ವಿಜೇತರಾದವರ ಹೆಸರುಗಳನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.)



ಮುಖ್ಯ ಅತಿಥಿ ಶ್ರೀಮತಿ ಯಮುನಾ ಮೂರ್ತಿಯವರಿಂದ ಬಹುಮಾನ ವಿತರಣೆ

ಪ್ರತಿಭಾ ಪ್ರದರ್ಶನ ಮತ್ತು ಪುರಸ್ಕಾರ ಕಾರ್ಯಕ್ರಮಗಳು ಅದೇ ತಿಂಗಳ 24ರಂದು ಎ.ಡಿ.ಎ. ರಂಗಮಂದಿರಲ್ಲಿ ಅದ್ದೂರಿಯಾಗಿ ನಡೆಯಿತು. ಅನುಭವಿ ಹಾಗೂ ಪ್ರತಿಭಾವಂತ ಸದಸ್ಯರುಗಳ ಒಗ್ಗಟ್ಟಿನ ಪರಿಶ್ರಮ ದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ತಯಾರಿ, ತಾಲೀಮು ಗಳ ಮೂಲಕ ಎಲ್ಲರ ಮನಮೆಚ್ಚುವ ಕಾರ್ಯಕ್ರಮವನ್ನು ಬಳಗದ ಚಿಣ್ಣರು ಚೊಕ್ಕದಾಗಿ ನಡೆಸಿಕೊಟ್ಟರು.

ಇಡೀ ಕಾರ್ಯಕ್ರಮವನ್ನು ಸಮರ್ಥವಾಗಿ ನಿರೂಪಿಸಿದ ಕುಮಾರಿ ನಮಿತಾ ಪ್ರಸ್ತಾವನೆಯ ನಂತರ ಅಂದಿನ ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯ ಕಲಾವಿದೆ ಶ್ರೀಮತಿ ಯಮುನಾ ಮೂರ್ತಿಯವರನ್ನು, ಬಳಗದ ಪ್ರಸಕ್ತ ಅಧ್ಯಕ್ಷೆ ಶ್ರೀಮತಿ ಗೀತಾ ವಾಸುದೇವರಾವ್ ಮತ್ತು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಭೀಮಾ ಜ್ಯುವೆಲರ್ಸ್‌ನ ಶ್ರೀ ಎ. ಪ್ರಭಾಕರ್‌ರಾವ್ ಹಾಗೂ ಬಳಗದ ಕಾರ್ಯದರ್ಶಿ ಶ್ರೀ ಹರಿದಾಸ ಉಪಾಧ್ಯಾಯ ಮತ್ತು ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಶ್ರೀ ರಮೇಶ್ ಭಟ್ ಅವರನ್ನು ವೇದಿಕೆಗೆ ಆದರದಿಂದ ಬರಮಾಡಿಕೊಂಡಳು.

ವೇದಿಕೆಯ ಮೇಲೆ ಸಾಲಾಗಿ ನಿಂತ ಬಳಗದ ಚಿಣ್ಣರ ತಂಡ ಸುಶ್ರಾವ್ಯವಾಗಿ ಪ್ರಾರ್ಥನೆ ಹಾಡಿ ಕಾರ್ಯಕ್ರಮಕ್ಕೆ ಶುಭಾರಂಭ ಮಾಡಿದರೆ ಮಾಸ್ಟರ್ ರಜತ್ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಜುಲೈ 10 ರಂದು ನಡೆದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯನ್ನು ನಡೆಸಿಕೊಟ್ಟ ಕುಮಾರಿ ದೀಕ್ಷಾ .ಎ ಭಟ್ ಸಭಿಕರ ಮೆಚ್ಚುಗೆ ಗಳಿಸಿದಳು.

ಮುಖ್ಯ ಅತಿಥಿ ಶ್ರೀಮತಿ ಯಮುನಾ ಮೂರ್ತಿಯವರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ ಕುಮಾರಿ ಶಾರ್ವರಿ ಸೋಮಯಾಜಿ ಹಿರಿಯ ಕಲಾವಿದೆಯ ಹಲವು ಹೆಗ್ಗಳಿಕೆಗಳ ವಿವರವನ್ನು ಸಭೆಗೆ ತಿಳಿಸಿದಳು. ಸಭೆಯನ್ನುದ್ದೇಶಿಸಿ ಚುಟುಕಾಗಿಯೇ ಮಾತನಾಡಿದ ಮುಖ್ಯ ಅತಿಥಿಗಳು ಕೆಲವು ಕಾಲ್ಪನಿಕ ಹಾಗೂ ನಿಜಪ್ರಸಂಗಗಳ ಬಣ್ಣನೆಯ ಮೂಲಕ ನೀತಿಯ ಸಂದೇಶ ನೀಡುವುದರ ಜೊತೆಗೆ ತನ್ನ ವಿಭಿನ್ನ ಶೈಲಿಯ ಮಾತುಗಾರಿಕೆಯಿಂದ ಮೂಲಕ ಸಭೆಯನ್ನು ರಂಜಿಸಿದರು.



ಶ್ರೀ ಎ. ಪ್ರಭಾಕರ ರಾವ್ ಅವರಿಂದ ಪ್ರತಿಭಾ ಪುರಸ್ಕಾರ




**ಸಾಂಸ್ಕೃತಿಕ ಕಾರ್ಯಕ್ರಮದ ಒಂದು ನೋಟ**

ಶ್ರೀಮತಿ ಪ್ರಿಯಾ ಉಪಾಧ್ಯಾಯ 2015–16ರ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಹೆಚ್ಚಿನ ಅಂಕ ಗಳಿಸಿದ ಬಳಗದ ಮಕ್ಕಳನ್ನು ಪ್ರತಿ ವರ್ಷದ ಪ್ರತಿಭಾ ಪುರಸ್ಕಾರದ ಪ್ರಾಯೋಜಕರಾದ ಭೀಮಾ ಜ್ಯುವೆಲರ್ಸ್‌ನ ಶ್ರೀಯುತ ಎ. ಪ್ರಭಾಕರ್‌ರಾವ್ ಮತ್ತು ವೇದಿಕೆಯಲ್ಲಿದ್ದ ಉಳಿದ ಗಣ್ಯರ ಮೂಲಕ ಪುರಸ್ಕರಿಸುವ ಕಾರ್ಯಕ್ರಮ ವನ್ನು ನಡೆಸಿಕೊಟ್ಟರು. (ಪುರಸ್ಕೃತರ ವಿವರವನ್ನು ಪ್ರತ್ಯೇಕವಾಗಿ ನೀಡಲಾಗಿದೆ.)

ಬಳಗದ ಅಧ್ಯಕ್ಷೆ ಶ್ರೀಮತಿ ಗೀತಾ ವಾಸುದೇವ ರಾವ್ ಈ ಕಾರ್ಯಕ್ರಮ ನೆರವೇರಿಸುವುದರಲ್ಲಿ ಸದಸ್ಯರ ಒಗ್ಗಟ್ಟಿನ ಪರಿಶ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಕಿರಿಯರಲ್ಲಿರುವ ಕಲಾಸಕ್ತಿಯನ್ನು ಗುರುತಿಸಿ ಬೆಳೆಸುವ ಅಗತ್ಯತೆಯನ್ನು ಒತ್ತಿ ಹೇಳಿದರು.

ಸಭಾ ಕಾರ್ಯಕ್ರಮದ ಕೊನೆಯಲ್ಲಿ ಸಾತ್ವಿಕ್ ಭಟ್ "ಇಂದಿನ ಈ ಮಧುರ ಸಂಜೆಗೆ ಹಲವು ಮಂದಿಯು ಕಾರಣ ಹಿರಿಯರೆಲ್ಲರ ಮಾರ್ಗದರ್ಶನದಲ್ಲಿ ಬೆರೆಸಿದ ಹೂರಣ ಮಕ್ಕಳೆಲ್ಲರ ಒಂದುಗೂಡಿಸಿ ತುಂಬಿ ಮನದೊಳು ಪ್ರೇರಣ ನಮ್ಮನಿಲ್ಲಿಗೆ ತಂದು ನಿಲ್ಲಿಸಿದೆಲ್ಲರಿಗೂ ಈ ತೋರಣ'' ಎಂದು ಕಾವ್ಯಮಯವಾಗಿ ಎಲ್ಲರಿಗೂ ವಂದನಾರ್ಪಣೆಯನ್ನು ಮಾಡಿದನು.

ಸಭಾ ಕಾರ್ಯಕ್ರಮದ ನಂತರ ಮಕ್ಕಳಿಂದ ಪ್ರದರ್ಶನಗೊಂಡ ವಿವಿಧ ಮನರಂಜನಾ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಗಳಿಸಿತು. ಶ್ರೀಮತಿ ಅನುರಾಧಾ ಹಾಗೂ ಶ್ರೀ ಉದಯಕೃಷ್ಣ ಉಪಾಧ್ಯಾಯರಂತಹ ಪ್ರತಿಭಾವಂತ ದಂಪತಿಯ ಪರಿಕಲ್ಪನೆ ಮತ್ತು ತರಬೇತಿಯಲ್ಲಿ ತಯಾರಾದ "ರಾಮಾಯಣದ ಸೇತುಬಂಧ" ಮತ್ತು "ರಂಗು ರಂಗಿನ ಭಾರತ"ವನ್ನು ಅತ್ಯಂತ ಸೊಗಸಾಗಿ ಪ್ರದರ್ಶಿಸಿದರೆ, ಕಲ್ಮಂಜೆ ಸಹೋದರಿಯರಾದ ವಾಗ್ದೇವಿ, ವಿಶ್ರುತಿಯ ಮಾರ್ಗದರ್ಶನದಲ್ಲಿ "ಗಂಗಾ" ಮತ್ತು "ಗೀತೋಪದೇಶ'' ನೃತ್ಯವನ್ನು ಮಕ್ಕಳ ತಂಡ ಭಾವಪೂರ್ಣವಾಗಿ ಪ್ರದರ್ಶಿಸಿದರು. ಶ್ರೀ ವಿಶ್ವೇಶಭಟ್ ಅವರ ನಿರ್ದೇಶನದಲ್ಲಿ ಕೆಲವು ಮಕ್ಕಳು ವಿವಿಧ ವಾದ್ಯಗಳ ಮೂಲಕ ದೇಶಭಕ್ತಿಯ ರಸ ಉಣಿಸಿದರೆ ಸಹನಾ ಮತ್ತು ಮೇಘನಾರವರ ತರಬೇತಿಯಲ್ಲಿ ತಯಾರಾದ ಮಕ್ಕಳು ಭಾವಗೀತೆಯ ಸರಮಾಲೆಯನ್ನು ಅದ್ಭುತವಾಗಿ ಹಾಡಿ ಸಭೆಯನ್ನು ರಂಜಿಸಿದರು.

ಕೊನೆಯಲ್ಲಿ ಗಣೇಶ್ ಸ್ಟೀಲ್ ಸೆಂಟರಿನ ಕೊಡುಗೈದಾನಿ ಶ್ರೀ ಭಾಸ್ಕರ್‌ರಾವ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ನೆನಪಿನ ಕಾಣಿಕೆ ಕೊಟ್ಟು ಪ್ರೋತ್ಸಾಹಿಸಿದರು.



**ಶ್ರೀ ಎಂ. ಭಾಸ್ಕರ್ ರಾವ್ ಅವರಿಂದ ಕಲಾವಿದರಿಗೆ ನೆನಪಿನ ಕಾಣಿಕೆ**

ಕಾರ್ಯಕ್ರಮಕ್ಕೆ ಬಂದ ಎಲ್ಲರಿಗೂ ರುಚಿಕರವಾದ ಉಪಾಹಾರದ ವ್ಯವಸ್ಥೆ ಎಂದಿನಂತೆ ಶ್ರೀಯುತ ಯು.ವಿ. ಕೃಷ್ಣಮೂರ್ತಿಯವರು ಪ್ರಾಯೋಜಿಸಿದ್ದರೆ, ಸರ್ವರಿಗೂ ಹನಿ ಕೇಕ್‌ನ ವಿತರಣೆಯನ್ನು ಕಾಫಿ ಹೌಸ್‌ನ ಮಾಲೀಕರು ಪ್ರಾಯೋಜಿಸಿದರು.

ಬಳಗದ ಉಳಿದ ವಿಭಾಗಗಳ ಜೊತೆಗೂಡಿ ಸಾಂಸ್ಕೃತಿಕ ವಿಭಾಗವು ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳ ಹೆತ್ತವರ ಸಂಪೂರ್ಣ ಸಹಕಾರದೊಂದಿಗೆ ತಯಾರಿಸಿ ನಡೆಸಿಕೊಟ್ಟ ಈ ಯಶಸ್ವಿ ಕಾರ್ಯಕ್ರಮ ಎಲ್ಲರೂ ಸೇರಿ ಕಲಸಿದ ರುಚಿಕರ ಹೂರಣ ಎನ್ನುವುದರಲ್ಲಿ ಸಂದೇಹವಿಲ್ಲ.

**– ರಮೇಶ್ ಭಟ್ ಹೆಚ್.**

## ಪ್ರತಿಭಾ ಸ್ಪರ್ಧೆ – ಬಹುಮಾನ ವಿಜೇತರು

**ಸಂಸ್ಕೃತ ಶ್ಲೋಕ (6 ವರ್ಷದವರೆಗೆ)**

I ವಿಷ್ಣು ಉಪಾಧ್ಯಾಯ

II ನಿಹಿರಾ ರಾವ್

III ದ್ರುವ ಉಪಾಧ್ಯಾಯ

**ಸಂಸ್ಕೃತ ಶ್ಲೋಕ (6–12 ವರ್ಷ)**

I ಸುಮೇಧ್ ಜಿ. ಭಟ್

II ಆರಭಿ ಭಟ್

III ಅದಿತಿ ದೇವಿ ಪ್ರಸಾದ್

**ದೇವರ ನಾಮ (6–12 ವರ್ಷ)**

I ಮಹತಿ .ಕೆ

II ಆರಬಿ ಭಟ್

III ಪರಿಣಿತ ಆಚಾರ್ಯ

**ದೇವರನಾಮ (12–18 ವರ್ಷ)**

I ಶಾರ್ವರಿ ಸೋಮಯಾಜಿ

II ಸ್ವಾತಿ ಜಿ.ಕೆ.

III ತೇಜಸ್ ಬಿ.ಯು.

**ಭಾವಗೀತೆ (12–18 ವರ್ಷ)**

I ಶಾರ್ವರಿ ಸೋಮಯಾಜಿ

II ಸ್ಫೂರ್ತಿ ಆರ್. ಭಟ್

III ತೇಜಸ್ ಬಿ.ಯು ಮತ್ತು
ಸರ್ವಜಿತ್ ಎ.ಎಸ್.

**ಡ್ರಾಯಿಂಗ್ (6 ವರ್ಷದವರೆಗೆ)**

I ಸಾನ್ವಿ .ಪಿ

II ಅಭಿಷೇಕ್ ವಿನಯ್‌ರಾಜ್

III ಶರಣ್ಯ ಗುರುಪ್ರಸಾದ್

**ಡ್ರಾಯಿಂಗ್ (6–12 ವರ್ಷ)**

I ಸಿಂಧು ಸುಧೀಂದ್ರ

II ಅಮೋಘ ರಾವ್ ವೈ.ಜಿ.

III ದೀಪ್ತಿ ಆರ್. ಭಟ್ ಮತ್ತು
ಆರಭಿ ಭಟ್

**ಛದ್ಮ ವೇಷ (12 ವರ್ಷದವರೆಗೆ)**

I ಧೃುತಿ ಉಪಾಧ್ಯಾಯ

II ನಿಖಿತಾ ವಿ. ಹೆಬ್ಬಾರ್

III ಆನ್ವಿ ಭಟ್

**ವಿಶೇಷ ಬಹುಮಾನ**

ಪಿ. ಪವನ್ ರಾವ್
ಸನ್ನಿಧಿ ಎಸ್. ರಾವ್

**ಏಕಪಾತ್ರಾಭಿನಯ (10–18 ವರ್ಷ)**

I ಧೃುತಿ ಉಪಾಧ್ಯಾಯ

II ಆರಭಿ ಭಟ್

**ಬಹುಮಾನ ವಿಜೇತರಿಗೆಲ್ಲಾ ಹಾರ್ದಿಕ ಅಭಿನಂದನೆಗಳು**

## ಸದಸ್ಯರಿಗೆ ಒಂದು ದಿನದ ಪ್ರವಾಸ

ಪ್ರತಿ ವರ್ಷದಂತೆ ಸಾಂಸ್ಕೃತಿಕ ವಿಭಾಗವು ದಿನಾಂಕ **25.12.2016ರ ಭಾನುವಾರ** ಪ್ರೇಕ್ಷಣೀಯ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಸಂಯೋಜಿಸಲಿದೆ. ಆಸಕ್ತರು ಪ್ರವಾಸದ ಬಗ್ಗೆ ಹೆಚ್ಚಿನ ವಿವರಗಳನ್ನು ದಿನಾಂಕ 20.11.2016 ರ ನಂತರ ಈ ಕೆಳಗಿನ ಕಾರ್ಯಕರ್ತರನ್ನು ಸಂಪರ್ಕಿಸಿ ಪಡೆಯಲು ಕೋರಲಾಗಿದೆ.

1. ಹೆಚ್. ರಮೇಶ್ ಭಟ್, ಸಂಚಾಲಕರು, ಸಾಂಸ್ಕೃತಿಕ ವಿಭಾಗ (98450 24708)
2. ಶ್ರೀಮತಿ ಗೀತಾ ಪಿ.ಆರ್. ರಾವ್ (9945938411)
3. ಶ್ರೀಮತಿ ಸುಧಾ ಎಂ. ರಾವ್ (9901127738)

# ಪ್ರತಿಭಾ ಪುರಸ್ಕೃತರು

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಪಡೆದ ಅಂಕ |
|---|---|---|---|
| **ಎಸ್ ಎಸ್ ಎಲ್ ಸಿ / 10ನೇ ತರಗತಿ** | | | |
| 1 | ಯು ಎಸ್ ಸುಧನ್ವ ಬಲ್ಲಾಳ್ | ಶ್ರೀಶ ಬಲ್ಲಾಳ್ | 91.20 |
| 2 | ಸಂದೀಪ್ ಎಸ್ ಹೊಳ್ಳ | ಪಿ ಸತ್ಯನಾರಾಯಣ ಹೊಳ್ಳ | 91.36 |
| 3 | ಅನುಷಾ ಭಟ್ | ವೈ ಎಸ್ ಸತ್ಯ ಪ್ರಸಾದ್ | 92.80 |
| 4 | ಜ್ಯೋತ್ಸ್ನ ಹೆಬ್ಬಾರ್ | ಚೇತನ್ ಎಂ ಆರ್ | 94.00 |
| 5 | ಶರಣ್ಯ ಜೆ ಉಪಾಧ್ಯಾಯ | ಕೆ ಜಯರಾಮ | 94.40 |
| 6 | ತೇಜಸ್ ಬಿ ಯು | ಉದಯ ಶಂಕರ್ ಬಿ ಕೆ | 94.66 |
| 7 | ವರ್ಷ ಎಸ್ ಭಟ್ | ಡಿ ಶರತ್ ಕುಮಾರ್ | 94.66 |
| 8 | ಫಲ್ಗುಣಿ ರಾವ್ | ಗುರುಪ್ರಸಾದ್ ರಾವ್ ಎಂ | 95.20 |
| 9 | ಶ್ರೇಯಸ್ ಹೆಬ್ಬಾರ್ | ಕೆ ಎಂ ರಾಘವೇಂದ್ರ ರಾವ್ | 96.17 |
| 10 | ಮಾಣಿಕ್ಯ ಎನ್ | ಡಾ: ನಾಗರಾಜ | 96.48 |
| 11 | ನಮಿತ ಆಚಾರ್ಯ | ವಾದಿರಾಜ ಆಚಾರ್ಯ | 96.83 |
| 12 | ಆದಿತ್ಯ ಭಟ್ ಪಿ ಆರ್ | ರವಿಪ್ರಕಾಶ್ ಪಿ ಎಸ್ | 96.83 |
| 13 | ಸುಬ್ರಮಣ್ಯ ಎಂ ಎಸ್ | ಸೂರ್ಯ ಸೋಮಯಾಜಿ ಎಂ | 97.44 |
| 14 | ಮಹಿಮಾ ಎಸ್ ಹೆಬ್ಬಾರ್ | ಶ್ರೀಶ ಹೆಬ್ಬಾರ್ ಪಿ | 98.72 |
| 15 | ಶ್ರೀರಕ್ಷಾ ಕೆ | ಕೆ ಕೃಷ್ಣಮೂರ್ತಿ | 98.88 |
| 16 | ರಮ್ಯ ಆರ್ | ರಾಮಚಂದ್ರ ಅಧಿಕಾರಿ | 98.88 |
| 17 | ನಿಧಿ ಭಟ್ ಜಿ | ಡಾ: ಗುರುಪ್ರಸಾದ್ ಎ ಎಸ್ | 99.04 |
| 18 | ಮಹಿಮಾ ಆರ್ ಶಾಸ್ತ್ರಿ | ರಾಧಾಕೃಷ್ಣ ಎಂ | ಸಿಜಿಪಿಎ 10 |
| 19 | ಆದರ್ಶ್ "ಜಯಕುಮಾರ್ ಭಟ್ | ವಿಜಯಕುಮಾರ್ ಯು ಭಟ್ | ಸಿಜಿಪಿಎ 10 |
| 20 | ಸ್ನೇಹ ಕೆ ಎ | ಅಶ್ವತ್ಥ ನಾರಾಯಣ ಕೆ | ಸಿಜಿಪಿಎ 10 |
| 21 | ಶ್ರೀಕೃಷ್ಣ ಹೆಬ್ಬಾರ್ | ರಾಘವೇಂದ್ರ ಹೆಬ್ಬಾರ್ | ಸಿಜಿಪಿಎ 10 |
| 22 | ಹೃಕೇಶ್ ಆರ್ ರಾವ್ | ಪಿ ರಾಜೇಶ್ ರಾವ್ | ಸಿಜಿಪಿಎ 10 |
| 23 | ಸಿತಾರಾ ಆಚಾರ್ | ಸುಧೀರ್ ಅಚಾರ್ | ಸಿಜಿಪಿಎ 10 |
| **2ನೇ ಪಿ ಯು ಸಿ / 12ನೇ ತರಗತಿ – ವಿಜ್ಞಾನ** | | | |
| 1 | ಕೆ ಸಹನಾ | ಕೆ ಸುಪ್ರೀತ್ | 92.50 |
| 2 | ಸುಧನ್ವ ಎಸ್ ಭಟ್ | ಎಸ್ ಶ್ರೀಧರ್ ಭಟ್ | 93.33 |
| 3 | ಬಿ ಹೆಚ್ ಶ್ರೇಯಸ್ | ಬಿ ಜಿ ಹರಿಕೃಷ್ಣ | 94.00 |
| 4 | ತನ್ವಿ ವಿನಯ ಕಾಸರವಳ್ಳಿ | ಡಾ: ವಿನಯ ಕೆ ಕೆ | 94.17 |
| 5 | ಅಭಿಜ್ಞಾ ಹೆಬ್ಬಾರ್ | ಶ್ರೀಧರ ಪಿ ಹೆಬ್ಬಾರ್ | 94.83 |
| 6 | ಮೈನಾ ಪಿ | ಪ್ರಸನ್ನಕುಮಾರ್ ಬಿ | 95.50 |
| 7 | ಅಂಕಿತಾ ಕೆ ಉಡುಪ | ಕೃಷ್ಣ ಉಡುಪ | 95.50 |
| 8 | ಅಶ್ವಿನಿ ರಾವ್ | ಆರ್ ರವಿಚಂದ್ರ | 95.83 |
| 9 | ಕೀರ್ತನ ಎಂ | ಮಂಜುನಾಥ ಉಪಾದ್ಯ ಆರ್ | 96.16 |
| 10 | ಮಧುಶ್ರೀ ಎಸ್ ರಾವ್ | ಆರ್ ಸತ್ಯನಾರಾಯಣ ರಾವ್ | 96.33 |
| 11 | ಸಂಗೀತಾ ಪಿ ಹೆಬ್ಬಾರ್ | ಎಂ ಪದ್ಮನಾಭ ಹೆಬ್ಬಾರ್ | 96.50 |
| 12 | ವರ್ಷಾ ರಾವ್ | ಡಾ: ವೇಣುಗೋಪಾಲ ರಾವ್ ಕೆ | 97.00 |
| 13 | ಸ್ವಾತಿ ಎಸ್ ಹತ್ವಾರ್ | ಸುಧೀಂದ್ರ ಕೆ ಬಿ | 98.00 |
| **2ನೇ ಪಿ ಯು ಸಿ / 12ನೇ ತರಗತಿ – ವಾಣಿಜ್ಯ** | | | |
| 1 | ವೈಷ್ಣವಿ ವಿ. | ವೆಂಕಟೇಶ | 98.33 |
| 2 | ತನ್ವಿ ಎಲ್ | ಲಕ್ಷ್ಮಿನಾರಾಯಣ ಉಪಾಧ್ಯಾಯ | 93.00 |

**ಪ್ರತಿಭಾ ಪುರಸ್ಕೃತರಿಗೆ ಹಾರ್ದಿಕ ಅಭಿನಂದನೆಗಳು**

# ಯುವ ವಿಭಾಗದಿಂದ ಕೌನ್ಸಿಲಿಂಗ್ ಮತ್ತು ವೇದಪಾಠ ಶಿಬಿರ

ಯುವ ವಿಭಾಗವು ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣದಲ್ಲಿ ಅತ್ಯುತ್ತಮ ಫಲಿತಾಂಶ ಸಾಧಿಸಲು ಪೂರಕವಾಗುವ ಕ್ರಮಗಳು ಹಾಗೂ ಓದಿನ ವಿಧಾನ ಮತ್ತು ಮುಂದಿನ ಶಿಕ್ಷಣದ ಆಯ್ಕೆ ಬಗ್ಗೆ ಮಾರ್ಗದರ್ಶನ ನೀಡುವ ಕೌನ್ಸಿಲಿಂಗ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಸ್ತಾಪಿಸಿದೆ. ಇದಲ್ಲದೆ ಉಪನಯನವಾಗಿರುವ ಬಾಲಕರಿಗೆ ವೇದಪಾಠ ಹಾಗೂ ದಿನನಿತ್ಯ ಪಠಣೆಗೆ ಸೂಕ್ತವಾದ ಶ್ಲೋಕ/ಮಂತ್ರಗಳ ಕಲಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಂಸ್ಕೃತ ಶಿಬಿರಗಳನ್ನು ನಗರದ ವಿವಿಧ ಬಡಾವಣೆಗಳಲ್ಲಿ ನಡೆಸಲು ಯೋಜಿಸಿದೆ. ಈ ಎರಡು ಕಾರ್ಯಕ್ರಮಗಳ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ವಿವರಗಳನ್ನು ನೀಡಿದ್ದು, ಸದಸ್ಯ ಬಾಂಧವರು ನೀಡುವ ಸಲಹೆ–ಸೂಚನೆಗಳನ್ನು ಆಧರಿಸಿ, ಈ ಕಾರ್ಯಕ್ರಮಗಳಿಗೆ ಅಂತಿಮ ರೂಪ ನೀಡಲಾಗುವುದು.

ತಮ್ಮ ಸಲಹೆ–ಸೂಚನೆ ಅಭಿಪ್ರಾಯಗಳನ್ನು ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್ (99456 88955) ರವರಿಗೆ ತಿಳಿಸಬೇಕಾಗಿ ಕೋರಲಾಗಿದೆ.

# ಸದಾ ಸ್ಮರಣೀಯ ಸಪ್ತಶ್ಲೋಕಗಳು

ಮಾತೃದೇವೋಭವ, ಪಿತೃದೇವೋಭವ ।
ಆಚಾರ್ಯದೇವೋಭವ, ಅತಿಥಿ ದೇವೋಭವ॥

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನ ವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ತ್ರಿದಳಂ ತ್ರಿಗುಣಾಕಾರಂ ತ್ರಿನೇತ್ರಂ ಚ ತ್ರಿಯಾಯುಧಮ್ ।
ತ್ರಿಜನ್ಮ ಪಾಪಸಂಹಾರಂ, ಏಕಬಿಲ್ವಂ ಶಿವಾರ್ಪಣಂ ॥

ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವೀ, ನಾರಾಯಣಿ ನಮೋಸ್ತುತೇ ॥

ಶಾಂತಾಕಾರಂ ಭುಜಗ ಶಯನಂ, ಪದ್ಮನಾಭಂ ಸುರೇಶಂ ।
ವಿಶ್ವಾಧಾರಂ ಗಗನಸದೃಶಂ, ಮೇಘವರ್ಣಂ ಶುಭಾಂಗಂ ॥
ಲಕ್ಷ್ಮೀಕಾಂತಂ, ಕಮಲನಯನಂ, ಯೋಗಹೃದ್ಧ್ಯಾನ ಗಮ್ಯಂ ।
ವಂದೇ ವಿಷ್ಣುಂ, ಭವಭಯಂಕರಂ, ಸರ್ವಲೋಕೈಕನಾಥಂ ॥

ಅವತಾರಪುರುಷ, ಪುರುಷೋತ್ತಮ ಶ್ರೀರಾಮಚಂದ್ರ!!
ಶ್ರೀರಾಮರಾಮೇತಿ, ರಮೇ ರಾಮೇ ಮನೋರಮೇ ।
ಸಹಸ್ರನಾಮ ತತ್ತುಲ್ಯಂ ರಾಮನಾಮವರಾನನೇ ॥

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಮರೋಗತಾಂ ।
ಅಜಾಡ್ಯಂ ವಾಕ್ಪಟುತ್ವಂ ಚ ಹನುಮತ್ ಶರಣಾದ್ಭವೇತ್ ॥

**–ಹಂದಾಡೆ ಸತ್ಯನಾರಾಯಣವು**

# ವ್ಯಾಸಂಗ ಸಹಾಯ ಯೋಜನೆ–ಅರ್ಜಿಗಳಿಗೆ ಆಹ್ವಾನ

ಆನಂದ ಬಳಗವು ಕೆಲವು ವರ್ಷಗಳ ಹಿಂದೆ ಕೆಲವು ಉದಾರ ಮನಸ್ಸಿನ ದಾನಿಗಳ ಸಹಕಾರದಿಂದ ಆರಂಭಿಸಿರುವ ವ್ಯಾಸಂಗ ಸಹಾಯ ಯೋಜನೆಯ ಲಾಭವನ್ನು ಬಳಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಈಗಾಗಲೇ ಪಡೆದಿರುತ್ತಾರೆ.

2016–17ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸೇರಬಯಸುವ ಆರ್ಥಿಕವಾಗಿ ದುರ್ಬಲರಾದ ಸದಸ್ಯರ ಪ್ರತಿಭಾವಂತ ಮಕ್ಕಳು ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ. ಆಸಕ್ತಿಯುಳ್ಳ ಹಾಗೂ ಅರ್ಹಸದಸ್ಯರುಗಳು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :

**ಶ್ರೀ ಯಸ್.ಯನ್.ಶರತ್‌ಚಂದ್ರ**
ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ
ದೂರವಾಣಿ : 41138879/9886040271

ಆಸಕ್ತರು ದಿನಾಂಕ : 24.7.2016ರೊಳಗಾಗಿ ನೋಂದಾಯಿಸಬೇಕಾಗಿ ವಿನಂತಿ

## ಅಕ್ಟೋಬರ್ 16 - ಜನವರಿ 17ರ ಅವಧಿಯ ವಿಶೇಷ ದಿನಗಳು

| | | |
|---|---|---|
| ಅಕ್ಟೋಬರ್ 17, | ಸೋಮವಾರ | ತುಲಾ ಸಂಕ್ರಮಣ |
| ಅಕ್ಟೋಬರ್ 26, | ಬುಧವಾರ | ಸರ್ವೈಕಾದಶೀ |
| ಅಕ್ಟೋಬರ್ 28, | ಶುಕ್ರವಾರ | ಜಲಪೂರಣ (ಸಂಜೆ) |
| ಅಕ್ಟೋಬರ್ 29, | ಶನಿವಾರ | ನರಕ ಚತುರ್ದಶಿ |
| ಅಕ್ಟೋಬರ್ 30, | ಭಾನುವಾರ | ಅಮಾವಾಸ್ಯೆ |
| ಅಕ್ಟೋಬರ್ 31, | ಸೋಮವಾರ | ಕಾರ್ತಿಕ ಮಾಸಾರಂಭ ಬಲಿಪಾಡ್ಯಮಿ |
| ನವೆಂಬರ್ 01, | ಮಂಗಳವಾರ | ಕರ್ನಾಟಕ ರಾಜ್ಯೋತ್ಸವ |
| ನವೆಂಬರ್ 06, | ಭಾನುವಾರ | ಎಪಿಎಲ್ ಕ್ರಿಕೆಟ್ ಪಂದ್ಯಾಟ |
| ನವೆಂಬರ್ 11, | ಶುಕ್ರವಾರ | ವೈಷ್ಣವೈಕಾದಶೀ |
| ನವೆಂಬರ್ 12, | ಶನಿವಾರ | ಉತ್ಥಾನ ದ್ವಾದಶೀ |
| ನವೆಂಬರ್ 14, | ಸೋಮವಾರ | ಹುಣ್ಣಿಮೆ |
| ನವೆಂಬರ್ 15, | ಮಂಗಳವಾರ | ವೃಶ್ಚಿಕ ಸಂಕ್ರಮಣ |
| ನವೆಂಬರ್ 17, | ಗುರುವಾರ | ಕನಕದಾಸ ಜಯಂತಿ |
| ನವೆಂಬರ್ 25, | ಶುಕ್ರವಾರ | ಸರ್ವೈಕಾದಶೀ |
| ನವೆಂಬರ್ 29, | ಮಂಗಳವಾರ | ಅಮಾವಾಸ್ಯೆ |
| ನವೆಂಬರ್ 30, | ಬುಧವಾರ | ಮಾರ್ಗಶಿರ ಮಾಸ, ಹೇಮಂತ ಋತು ಆರಂಭ |
| ದಿಶಂಬರ 05, | ಮಂಗಳವಾರ | ಸುಬ್ರಹ್ಮಣ್ಯ ಷಷ್ಠೀ |
| ದಿಶಂಬರ 10, | ಶನಿವಾರ | ಸರ್ವೈಕಾದಶೀ |
| ದಿಶಂಬರ 13, | ಮಂಗಳವಾರ | ಹುಣ್ಣಿಮೆ |
| ದಿಶಂಬರ 15, | ಗುರುವಾರ | ಧನು ಸಂಕ್ರಮಣ |
| ದಿಶಂಬರ 24, | ಶನಿವಾರ | ಸರ್ವೈಕಾದಶೀ |
| ದಿಶಂಬರ 29, | ಗುರುವಾರ | ಅಮಾವಾಸ್ಯೆ (ಎಳ್ಳಮವಾಸ್ಯೆ) |
| ದಿಶಂಬರ 30, | ಶುಕ್ರವಾರ | ಪುಷ್ಯ ಮಾಸಾರಂಭ |
| ಜನವರಿ 1/2017 | ಭಾನುವಾರ | ಹೊಸ ಇಸವಿ ಆರಂಭ |
| ಜನವರಿ 09, | ಮಂಗಳವಾರ | ವೈಷ್ಣವೈಕಾದಶೀ ಉಡುಪಿ ಸಪ್ತೋತ್ಸವಾರಂಭ |
| ಜನವರಿ 12, | ಗುರುವಾರ | ಹುಣ್ಣಿಮೆ |
| ಜನವರಿ 14, | ಶನಿವಾರ | ಮಕರ ಸಂಕ್ರಮಣ |

(ಆಧಾರ: ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಂಗ)

# ಗೋಡೆ ಗಡಿಯಾರ

ನಮ್ಮ ಮನೆಯ ಗೋಡೆ ಗಡಿಯಾರ
ತಿಳಿಸುವುದದು ಸಮಯ ವಾರ
ನನಗೀಗ ವಯಸ್ಸು ಎಪ್ಪತ್ತು
ನಾನು ಚಿಕ್ಕವನಿದ್ದಾಗಲೂ ಈ ಗಡಿಯಾರವಿತ್ತು ॥ 1 ॥

ವಾರಕ್ಕೊಮ್ಮೆ ಅದಕೆ ಊಟ
ನಡೆಸಲೆಂದದು ನಿಖರ ಓಟ
ಎರಡೂ ಕೈಗಳಿಂದದು ಉಣ್ಣುವುದು
ತನ್ನ ಓಟವ ಜಾರಿಯಾಗಿರಿಸುವುದು ॥ 2 ॥

ಮೂವತ್ತು ನಿಮಿಷಗಳಿಗೊಮ್ಮೆ ಅದರ ಸದ್ದು
ಸಮಯದ ಪಯಣವ ಗುರುತಿಸುವ ಈ ಸದ್ದು
ಗಂಟೆ-ಅರ್ಧಗಂಟೆಗಳ ಈ ಪರ್ವಬಿಂದು
ನೆನಪಿಸುವುದು ಜೀವನ ಸವಿಯಿತೆಂದು ॥ 3 ॥

ದಿನದ ವೇಳೆ ಚಲಿಸುವುದು ಸರಾಗ
ಕೆಲಸ ಕಾರ್ಯಗಳೊಂದಿಗೆ ಅನುರಾಗ
ರಾತ್ರಿಯ ಹೊತ್ತು ಕಳೆಯುವನು ಅತಿ ನಿಧಾನ
ವಿರಹಿಗಳಿಗಿದೇ ಅಸಮಾಧಾನ ॥ 4 ॥

ನಿದ್ರಾಹೀನರದ್ದೂ ಇದೇ ಗೋಳು
ರಾತ್ರಿಯ ಕಾಲ ನಿಧಾನವೆಂಬ ಅಳು
ನಿದ್ರೆಯೂ ಸೊನ್ನೆ, ಚಿಂತೆಗಳದ್ದೇ ದಿನ್ನೆ
ದಿನಕರ ಬೇಗ ಉದಯಿಸಲೆಂಬ ಸನ್ನೆ ॥ 5 ॥

ಐದು ನಿಮಿಷ ದೀರ್ಘವೇ ಹ್ರಸ್ವವೇ
ಎಂಬ ಪ್ರಶ್ನೆಯ ಬಗ್ಗೆ ಯೋಚಿಸಿ ತುಸುವೇ
ಉತ್ತರವ ತಿಳಿಸುವುದು ನಿಮ್ಮ ಸ್ಥಿತಿಯೊಂದೇ
ಸ್ನಾನದ ಕೊಠಡಿಯ ಬಾಗಿಲ ಮುಂದೆ - ಹಿಂದೆ ॥ 6 ॥

ದೀರ್ಘ - ಹ್ರಸ್ವಗಳು ಮನೋಸ್ಥಿತಿಯ ಪ್ರತಿಬಿಂಬ
ಪ್ರೇಮಿಯ ನಿರೀಕ್ಷೆಯಾ ಸಂಗ ಎಂಬುದರ ಬಿಂಬ
ದೀರ್ಘವಿರಲಿ, ಹ್ರಸ್ವವಿರಲಿ ಗಡಿಯಾರಕ್ಕಿಲ್ಲ ಚಿಂತೆ
ಕಾಲದ ಪಯಣ ದಾಖಲಿಸುವ ಗೊಡವೆಯಂತೆ ॥ 7 ॥

ಡಾ॥ ಶ್ರೀ ವೆಂಕರಟರಮಣ, ತಲಪಾಡಿ

# ಆನಂದ ಸಭಾಗೃಹ

ಬನ್ನೇರುಘಟ್ಟ ರಸ್ತೆ, ಬೆಂಗಳೂರು




## ಸಮಾರಂಭಗಳಿಗೆ ಸುಸಜ್ಜಿತವಾದ ಸಭಾಭವನ

**ಆನಂದ ಬಳಗ (ರಿ.) ಬೆಂಗಳೂರು ಇವರು ಆನಂದ ಬಳಗ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದೊಂದಿಗೆ ನಿರ್ಮಿಸಿದ ಆನಂದ ಸಭಾಗೃಹ ಇದೀಗ ಸಾರ್ವಜನಿಕ ಆಸಕ್ತರ ಉಪಯೋಗಕ್ಕಾಗಿ ಸುಸಜ್ಜಿತವಾಗಿ ರೂಪುಗೊಂಡಿದೆ.**

### ಸಭಾಗೃಹದ ವಿಶೇಷತೆಗಳು

- ಪ್ರಶಾಂತವಾದ ಪರಿಸರ, ಧಾರಾಳವಾದ ಪಾರ್ಕಿಂಗ್ ಜಾಗ
- ನಗರದ ಜಂಜಡಗಳಿಂದ ದೂರ; ಆದರೆ ಸಿಟಿಯ ಅನುಕೂಲಗಳಿಗೆ ಹತ್ತಿರ
- ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಸುಮಾರು 15 ಕಿ.ಮೀ. ದೂರ.
- 750 ಜನರಿಗೆ ಆಸನ ವ್ಯವಸ್ಥೆಯುಳ್ಳ ಸಭಾಂಗಣ / ಕಲ್ಯಾಣ ಮಂಟಪ
- ವಿಸ್ತಾರವಾದ ವೇದಿಕೆ - ಎರಡು ಗ್ರೀನ್ ರೂಮುಗಳು
- ಸುಸಜ್ಜಿತವಾದ 10 ವಾಸ್ತವ್ಯ ಕೊಠಡಿಗಳು
- ಒಂದು ಸಾರಿ 300 ಜನರಿಗೆ ಅವಕಾಶವುಳ್ಳ ಭೋಜನ ಶಾಲೆ, ಡೈನಿಂಗ್ ಟೇಬಲ್, ಕುರ್ಚಿ ವ್ಯವಸ್ಥೆ
- ಆಧುನಿಕ ರೀತಿಯ ಅಡುಗೆ ಕೋಣೆ
- ವಿಫುಲವಾದ ನೀರಿನ ಲಭ್ಯತೆ, ಜನರೇಟರ್‌ನ ವ್ಯವಸ್ಥೆ

**ಮಾತ್ರವಲ್ಲ: ಬಾಡಿಗೆ ದರವೂ ಬಹಳಷ್ಟು ಕಡಿಮೆ**

**ಮುಂಗಡ ಕಾಯ್ದಿರಿಸಲು ಮತ್ತು ಹೆಚ್ಚುವರಿ ವಿವರಗಳಿಗೆ ಸಂಪರ್ಕಿಸಿ :**

ಶ್ರೀ ನೀಲೇಶ್ ಶ್ಯಾನುಭೋಗ್


ಸಹ ವ್ಯವಸ್ಥಾಪಕರು, ಆನಂದ ಸಭಾಗೃಹ

ಸೈಟ್ ನಂ . 23, ಬನ್ನೇರು ಘಟ್ಟ ರಸ್ತೆ, ಬನ್ನೇರುಘಟ್ಟ ಗ್ರಾಮ ಪಂಚಾಯಿತಿ,

ಬೆಂಗಳೂರು – 560 083 ದೂರವಾಣಿ : 96630 35533

# ಆನಂದ ಬಳಗ ಪ್ರೀಮಿಯರ್ ಲೀಗ್ 2016

## 06-11-2016



ಪ್ರಥಮ ಬಾರಿಗೆ ಸಂಯೋಜಿಸಿದ ಎ.ಪಿ.ಎಲ್ ಮತ್ತು ಎ.ಬಿ.ಎಲ್‌ನ ಯಶಸ್ಸು ಮತ್ತು ಜನಪ್ರಿಯತೆಯಿಂದ ಸ್ಫೂರ್ತಿಗೊಂಡ ಯುವ ವಿಭಾಗ ಇದೀಗ ಎ.ಪಿ.ಎಲ್ (ಆನಂದ ಬಳಗ ಪ್ರೀಮಿಯರ್ ಲೀಗ್) 2016ನ್ನು ಸಂಯೋಜಿಸುತ್ತಿದೆ

ಬಳಗದ ಎಲ್ಲಾ ಉಪವಿಭಾಗಗಳ ಸಹಯೋಗದೊಂದಿಗೆ ದಿ.06-11-2016ರ ಭಾನುವಾರ ಬೆಳಿಗ್ಗೆ 6.30 ರಿಂದ ಸಂಜೆ 6ರವರೆಗೆ ಎ.ಪಿ.ಎಲ್ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ.



**ಸ್ಥಳ: ರೈಲ್ವೇ ಕ್ರೀಡಾಂಗಣ (ರೈಲ್ವೇ ಆಸ್ಪತ್ರೆ ಎದುರು)**
ಎಂ.ಜಿ. ಕಾಲನಿ, ಓಕುಳಿಪುರಂ, ಬೆಂಗಳೂರು – 560 023
(ಮೆಜೆಸ್ಟಿಕ್‌ನಿಂದ ರಾಜಾಜಿನಗರಕ್ಕೆ ಹೋಗುವ ರಸ್ತೆಯಲ್ಲಿ, ಓಕುಳಿಪುರಂ ಟ್ರಾಫಿಕ್ ಸಿಗ್ನಲ್‌ನಲ್ಲಿ ಎಡಕ್ಕೆ ತಿರುಗಬೇಕು)

ಆನಂದ ಬಳಗದ ಸದಸ್ಯರೇ ಪ್ರಾಯೋಜಿಸಿರುವ ಎಂಟು ತಂಡಗಳು ಪ್ರಶಸ್ತಿಗಾಗಿ ಸೆಣಸಾಡಲಿದ್ದು ವಿಜೇತ ತಂಡಕ್ಕೆ ಆಕರ್ಷಕ ರೋಲಿಂಗ್ ಶೀಲ್ಡ್ ಮತ್ತು ನಗದು ಬಹುಮಾನ ಲಭಿಸಲಿದೆ.

> ವಿ.ಸೂ: ಬೃಹತ್ ಸಂಖ್ಯೆಯಲ್ಲಿ ವೀಕ್ಷಕರು ಸೇರಲಿರುವ ಎಪಿಎಲ್ 2016 ಕ್ರೀಡಾಂಗಣದ ಸುತ್ತ ಜಾಹೀರಾತು ಬ್ಯಾನರ್‌ಗಳನ್ನು ಹಾಕಲು ಅವಕಾಶವಿದ್ದು, ಇದರ ಸದುಪಯೋಗವನ್ನು ಪಡೆಯಲು ಆಸಕ್ತಿಯುಳ್ಳವರು ಯುವ ವಿಭಾಗದ ಸಂಚಾಲಕರಾಗಿರುವ ಶ್ರೀ ಎಂ. ದಿನೇಶ್‌ರಾವ್ (99456 88955) ಎಪಿಎಲ್ ಸಂಚಾಲಕರಾದ ಶ್ರೀ ಎಂ.ಕೆ. ಗುರುಮೂರ್ತಿ (98440 22692), ಶ್ರೀ ಸಂದೀಪ್‌ರಾವ್ (98450 98150) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಎಪಿಎಲ್ ದಿನ ಸದಸ್ಯರಿಗೆ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಭರ್ಜರಿ ಭೋಜನ ಮತ್ತು ಸಂಜೆಯ ಲಘು ಉಪಾಹಾರದ ವ್ಯವಸ್ಥೆಯನ್ನು ಕ್ರೀಡಾಂಗಣದಲ್ಲೇ ಮಾಡಲಾಗಿದೆ. ಅದಲ್ಲದೆ ಐಸ್‌ಕ್ರೀಂ, ಚಾಟ್ಸ್ ಮೊದಲಾದ ತಿಂಡಿ-ತಿನಿಸುಗಳೂ ದಿನವಿಡೀ ಲಭ್ಯವಿರುತ್ತದೆ.

ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದಿನಪೂರ್ತಿ ನಮ್ಮೊಂದಿಗಿದ್ದು, ಕ್ರೀಡಾಳುಗಳನ್ನು ಪ್ರೋತ್ಸಾಹಿಸಿ, ಎಪಿಎಲ್ 2016ನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

| | |
|---|---|
| **ಎಸ್. ಹರಿದಾಸ ಉಪಾಧ್ಯ** | **ಶ್ರೀಮತಿ ಗೀತಾ ವಾಸುದೇವರಾವ್** |
| ಕಾರ್ಯದರ್ಶಿ | ಅಧ್ಯಕ್ಷರು |

(ಎಪಿಎಲ್‌ನಲ್ಲಿ ಭಾಗವಹಿಸುವ ತಂಡಗಳ ವಿವರಗಳನ್ನು ಪುಟ ಪುಟ 23ರಲ್ಲಿ ನೀಡಲಾಗಿದೆ.)

**ವಿಶೇಷ ಆಕರ್ಷಣೆ:**

ಪಂದ್ಯಾವಳಿಯಲ್ಲಿ ವಿವಿಧ ವಿಶೇಷ ಸಾಧನೆ ಮಾಡಿದವರಿಗೆ ಆಕರ್ಷಕ 'On the Spot' ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುವುದು. ಮಕ್ಕಳಿಗೂ ವಿವಿಧ ರೀತಿಯ ಮೋಜಿನ ಹಾಗೂ ಮನೋರಂಜನಾ ಆಟಗಳನ್ನು ಏರ್ಪಡಿಸಲಾಗುವುದು.

# Start the day feeling .....



# .......Light & comfortable

Non Habit forming




## For sure relief from CONSTIPATION use...

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in




# Get a Website in 4 HOURS

Get a responsive site complete with pictures, content, design and CMS right now!

Express Website @
**₹5999/-***
(Including tax)

## You have a GREAT BUSINESS, You deserve a GREAT WEBSITE

**webbazaar®**
GET ONLINE, GET NOTICED

# +91-9741129439

**Corporate Office :**
**eMarket Web Technologies Pvt Ltd.**
First Floor, RR Chambers, No. 2, 11th Main Road,
Vasanth Nagar, Bangalore - 560052
Email : express@webbazaar.com
Call : +91 7411 000 403 | 080-6999 6666
Website : www.webbazaar.com

**Sub-Distributor :**
**Smart Byte Services**
Contact Person : Mr.Ballal
Email : ballal@smartbyte.in


* Subsequent subscription renewal @ ₹2999/- including tax * Conditions apply. Pay as you use for addons.

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments*

# Mr. B.G.Bairy

*Managing Director*

*Bayir Group of Companies*

Bayir Chemicals | Bayir Extracts Pvt. Ltd. | Beloorbayir Biotech Ltd. | Sneha Natura




*Future with Nature*

## Makers of Quality based herbal formulations

SAGUN CAPSULE : Anti Arthritic
HEPBAC Capsule : Liver corrective
NUTRIHERB Capsule :For general debility
ARSHACARE Capsule: For Ano-rectal care
LAXSEN Capsule : Safe Laxative
MEDHYN Capsule : Stress reliever
AYUGINEE Tablet: Natural cartilage protective
SAGUN Liniment : Topical Analgesic
HEPBAC Syrup : Ideal Appetizer
BYEKOF Syrup :Effective cough remedy
MEDHYN Syrup: Memory enhancer

## Other Therapeutic formulations

GINEE Tablet : For Osteo Arthritis | BYCAL Tablet : Richest Calcium
BYNAC Tablet :Analgesic & Anti pyretic | BYFOL Tablet: For Folate deficiency

*For more details, contact :*

**SNEHA NATURA, A unit of Bayir Group, Corporate Office,**
**No. 92/1/1, PVR Towers, Katriguppa Main Road, Bangalore- 85**
**INDIA**
**Ph : 91-80-26798464, 91-80-43489900 upto 99, Fax : 91-80- 26890518**
**E-mail: bayirche@gmail.com**
**WEB: www.bayirextracts.com**



ನನ್ನ ಬ್ಯಾಂಕ್ ಖಾತೆ ನನಗೆ ಬೇಕಾದಂತೆ
ಕೆಬಿಎಲ್
ವನಿತಾ
ಮಹಿಳೆಯರಿಗಾಗಿ ಉಳಿತಾಯ ಖಾತೆ
ಕೆಬಿಎಲ್ ವನಿತಾ ಹೊಸ ಉಳಿತಾಯ ಖಾತಾ ಸೌಲಭ್ಯವನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ಪ್ರಸ್ತುತ ಪಡಿಸಲು ಹೆಮ್ಮೆಪಡುತ್ತಿದ್ದೇವೆ. ಹಲವಾರು ಸೌಲಭ್ಯಗಳನ್ನು ಹೊಂದಿರುವ ಇದು ಎಲ್ಲಿ, ಯಾವಾಗಲಾದರೂ ಬ್ಯಾಂಕಿಂಗ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ.
ವಿಶೇಷ ಸೌಲಭ್ಯಗಳು *
• ಕನಿಷ್ಠ ಉಳಿಕೆ ಇರಬೇಕೆಂದಿಲ್ಲ
• ಉಚಿತ ಮನಿಪ್ಲಾಂಟ್-ಅಂತಾರಾಷ್ಟ್ರೀಯ ವೀಸಾ ಡೆಬಿಟ್ ಕಾರ್ಡ್
• ಉಚಿತ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ
• ಉಚಿತ ಎಸ್‌ಎಂಎಸ್
• ಬಹುಶಾಖಾ ಸೌಲಭ್ಯ
• ಉಚಿತವಾಗಿ ಹಣ ವರ್ಗಾವಣೆ
ಉಚಿತ ₹50,000* ವರೆಗೆ ಚಿನ್ನಾಭರಣಗಳ ಮೇಲೆ ವಿಮೆ
ಸರಳ ಬ್ಯಾಂಕಿಂಗ್‌ಗಾಗಿ ಕೆಬಿಎಲ್ ವನಿತಾ ಉಳಿತಾಯ ಖಾತೆ ಇಂದೇ ತೆರೆಯಿರಿ.
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ
ಕರ್ನಾಟಕ ಬ್ಯಾಂಕ್ ಲಿ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು – 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ದಕ್ಷಿಣ ಬೆಂಗಳೂರಿನ ಅತಿ ದೊಡ್ಡ

ವಿರಾಮ ತಾಣ, ಈಗ ನಿಮಗಾಗಿ ತೆರೆದಿದೆ.

ರಾಯಲ್ ಮೀನಾಕ್ಷಿ ಮಾಲ್

Come Enjoy Maadi!




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕೃತ, ಶಾಪಿಂಗ್ ಹಾಗೂ ಮನೋರಂಜನೆ ಕೇಂದ್ರ

- 4.3 ಲಕ್ಷ ಚ.ಅಡಿ ವಿಸ್ತೀರ್ಣದೊಂದಿಗೆ 850 ಕಾರ್ ನಿಲ್ಲಿಸಲು ಸ್ಥಳ, ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ.
- ಜೆ.ಪಿ.ನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.
- ಉದ್ದೇಶಿಸಲಾದ ಮೆಟ್ರೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ.
- ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ.

**The brand mix includes:** • Cinepolis • Hyper City • Max • Croma • Reliance Timeout • Reliance Trends • Amoeba • Aharam-The Food Court • KFC, McDonald's • TGIF • Louis Philippe • Allen Solly • Reebok • Woodlands • Levi's • Wrangler • Lee • VIP Luggage • Mother Earth • Costa Coffee • Barista • FabIndia • Health & Glow • Nike • Rockport • Van Heusen • Swensens and other leading national and international brands/retail outlets.

**VISHALA INDIA COMMERCIAL DEVELOPERS PVT. LTD.**, No. E1/16, 1st Floor, 1st Cross, Syndicate Bank Colony
Bannerghatta Road, Bangalore 560 076. Tel: 26487299, Fax: 26487300
**E-mail: vishalaindia@gmail.com, www.vishalaindia.com, www.royalmeenakshimall.com**

**ವೈಚಾರಿಕ ಲೇಖನ**

# ಹಬ್ಬದಿಂದ ಶುಭ ಸಂಸ್ಕಾರ

ಹಬ್ಬವೆಂದರೆ ಕೇವಲ ಮಂಗಳ ಸ್ನಾನ, ಶುಭ್ರ ವಸ್ತ್ರಧಾರಣೆ, ಬಂಧುಗಳನ್ನು ಕೂಡಿಕೊಂಡು ಸಿಹಿ ರುಚಿಯಾದ ತಿನಿಸುಗಳನ್ನು ತಿನ್ನುವುದಷ್ಟಕ್ಕೇ ಸೀಮಿತ ವಲ್ಲ. ಹಬ್ಬಗಳಿಗೆ ಪೌರಾಣಿಕ ನೆಲೆ, ತತ್ವಗಳ ಕಲೆ, ಐತಿಹಾಸಿಕ ಹಿನ್ನೆಲೆ ಇರುತ್ತವೆ. ಹಬ್ಬಗಳ ನಿಜವಾದ ಅರಿವಿನಿಂದ ಜ್ಞಾನಶಕ್ತಿ, ಆ ಜ್ಞಾನದಿಂದ ತನ್ನಲ್ಲಿ ಧರ್ಮ ಪ್ರಧಾನವಾದ ಅಂತಃಶಕ್ತಿ ನಿರ್ಮಿಸಿಕೊಳ್ಳಬೇಕೆಂಬ ಇಚ್ಛಾಶಕ್ತಿ, ಇವೆರಡು ಗುಣಗಳಿಂದ ವ್ಯಕ್ತಿಯಲ್ಲಿ ಪ್ರಾಪ್ತವಾಗುವ ಕ್ರಿಯಾಶಕ್ತಿಯೇ ಹಬ್ಬಗಳ ಆಚರಣೆಯ ಮೂಲ ಉದ್ದೇಶ.

ಕೇವಲ ಆರ್ಥಿಕ ಪ್ರಗತಿ ಮಾತ್ರ ಸಮಾಜದ ಅಥವಾ ವ್ಯಕ್ತಿಯ ಪ್ರಗತಿಯಲ್ಲ. ವ್ಯಕ್ತಿ ಸದಾಚಾರ ಸಂಪನ್ನನಾಗಿ, ಸುಸಂಕೃತನಾಗಿ, ಪ್ರಮಾಣಿಕನಾದರೆ ಅದೇ ರಾಷ್ಟ್ರದ ನಿಜವಾದ ಸಂಪತ್ತು. ಸದಾ ಕಾಲಕ್ಕೂ ವ್ಯಕ್ತಿಯಲ್ಲಿ ಬೆಳೆಯಬಹುದಾದಂತಹ, ಅವನ ಅಂತಃಶಕ್ತಿಯನ್ನು ಬಲಹೀನ ಮಾಡುವಂತಹ, ಅವನ ಅಂತಃಶಕ್ತಿಯನ್ನು ಬಲಹೀನ ಮಾಡುವಂತಹ ಸ್ವಾರ್ಥ, ಕಾಮ, ಕ್ರೋಧ, ಆಡಂಬರ, ಅಹಂಕಾರದ ನಿವಾರಣೆ ಹಬ್ಬಹರಿದಿನಗಳ ಆಚರಣೆಯಲ್ಲಿ ಅಡಗಿದೆ.

ಪ್ರಸ್ತುತ ಹೆಚ್ಚಾಗಿ ಸದಾಚಾರಕ್ಕಿಂತ, ಸಂಪ್ರದಾಯ ಕ್ಕಿಂತ, ಸ್ವೇಚ್ಛಾಚಾರಕ್ಕೆ ಹಂಬಲಿಸುವ ಸಮಾಜವನ್ನು ಸುತ್ತಲೂ ಕಾಣುತ್ತಿದ್ದೇವೆ. ಶ್ರೀಕೃಷ್ಣನು ಗೀತೆಯಲ್ಲಿ ನುಡಿದಂತೆ

**ಯಃಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।**
**ನ ಸ ಸಿದ್ಧಮವಾಪ್ನೋತಿ ನ ಸುಖಂ ನ ಪರಾ ಗತಿಮ್ ॥**

ಯಾರು ಶಾಸ್ತ್ರವಿಧಿಯನ್ನು ಮೀರಿ ತನ್ನಿಷ್ಟದಂತೆ ನಡೆಯುವನೋ ಅವನಿಗೆ ಕಾರ್ಯಸಿದ್ಧಿಯಾಗುವುದಿಲ್ಲ, ಸುಖವೂ ದೊರೆಯದು, ಪರಮ ಗತಿಯೂ ದೊರೆಯದು.

ಆದ್ದರಿಂದ ಹಬ್ಬದ ದಿನಗಳು ಎಲ್ಲರಿಗೂ ದಿಕ್ಸೂಚಿ ಇದ್ದಂತೆ. ಇಹದಲ್ಲಿ ನೆಮ್ಮದಿ, ಪರದಲ್ಲಿ ಉತ್ತಮ ಗತಿ, ಹಬ್ಬದ ಶುದ್ಧಾಚರಣೆಯಿಂದಾಗಿ ನಾವು ಎಲ್ಲ ಭೌತಿಕ ಸುಖ ಭೋಗಗಳನ್ನು ಅನುಭವಿಸುತ್ತಿದ್ದೇವೆ. ವಿಜ್ಞಾನದ ಬೆಳವಣಿಗೆ ತುಂಬ ಅಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಭೌತಿಕ ವಿಜ್ಞಾನ ಎಷ್ಟೇ ಬೆಳೆದರೂ ಅದಕ್ಕೆ ಅದರದೇ ಆದ ಇತಿ ಮಿತಿ ಇದೆ. ಮನುಷ್ಯನಲ್ಲಿ ನಿರ್ಮಾಣವಾಗುವ ಸ್ವಾರ್ಥ, ಅಹಂಕಾರ, ಕ್ರೋಧದಂತಹ ಪಶು ಪ್ರವೃತ್ತಿಗಳನ್ನು ಈ ವಿಜ್ಞಾನ ನಿವಾರಣೆ ಮಾಡಲಾರದು. ವ್ಯಕ್ತಿಯನ್ನು ಮನುಷ್ಯನನ್ನಾಗಿಸಿ, ನಂತರ ದೇವತ್ವಕ್ಕೆ ಕೊಂಡೊಯ್ಯುವ ಸಂಸ್ಕಾರ ಕೇವಲ ಅರ್ಥಗರ್ಭಿತವಾಗಿ ಹಬ್ಬಗಳನ್ನು ಆಚರಿಸುವ ಮೂಲಕವೇ ಪಡಯಲು ಸಾಧ್ಯ.

ವಿಶೇಷ ಅಧಿಷ್ಠಾನ ಇರುವ ಇಂತಹ ಪರ್ವ ದಿನಗಳಲ್ಲಿ ಋಷಿ ಮುನಿಗಳ, ದೇವತೆಗಳ ಹಾಗೂ ಭಗವಂತನ ಅನುಗ್ರಹದಿಂದ ವ್ಯಕ್ತಿ ಪರಿವರ್ತನೆ ಹೊಂದುತ್ತಾನೆ. ಅವನಲ್ಲಿರುವ ದೈವೀ ಗುಣಗಳು ಜಾಗೃತವಾಗುತ್ತದೆ. ಅವನ ಜೀವನ ಸಾರ್ಥಕವಾಗುವ ಪಥದಲ್ಲಿ ಮುಂದುವರಿಯುತ್ತಾನೆ.

ನಮ್ಮ ಹಿಂದೂ ಧರ್ಮ ಸನಾತನ (ಅಳಿವಿಲ್ಲದ್ದು), ಪುರಾತನ ಕಾಲದಿಂದಲೂ ಹಿಂದೂಗಳಲ್ಲಿ ಧರ್ಮಕ್ಕೆ ಮೊದಲ ಆದ್ಯತೆ ಇದೆ. ಹಿಂದುವು ಒಬ್ಬ ಸುಸಂಸ್ಕೃತ ವ್ಯಕ್ತಿ, ಅವನು ಏಳುವುದು ಧಾರ್ಮಿಕವಾಗಿ, ತನ್ನ ಕಾರ್ಯಗಳನ್ನು ಮಾಡುವುದು ಧಾರ್ಮಿಕವಾಗಿ, ಆಹಾರ ಸೇವಿಸುವುದು ಧಾರ್ಮಿಕವಾಗಿ, ವಿಶ್ರಾಂತಿ ಪಡೆಯುವುದು ಧಾರ್ಮಿಕ ವಾಗಿ, ಅವನ ದಿನಚರಿಯೇ ಧಾರ್ಮಿಕವಾಗಿರುತ್ತದೆ. ನಿಸ್ಸಂಶಯವಾಗಿ ಅವನ ಧಮನಿಗಳಲ್ಲಿ, ನರನಾಡಿಗಳಲ್ಲಿ ಶ್ರೇಷ್ಠ ಋಷಿಮುನಿಗಳ ರಕ್ತ ಸಂಚರಿಸುತ್ತಿರುತ್ತದೆ. ನಮ್ಮ ಹಿಂದೂಗಳಿಗೆ ನಿತ್ಯವೂ ಹಬ್ಬ, ಕ್ಷಣ ಕ್ಷಣವೂ ಪವಿತ್ರ. ಏಕೆಂದರೆ ನಾವು ಸಾಧನಾ ಜೀವಿಗಳು, ನಾವು ಜನ್ಮಿಸಿರುವ ಈ ನೆಲ ಮಾತೃಭೂಮಿ, ಪಿತೃಭೂಮಿ, ದೇವ ಭೂಮಿ, ದಿವ್ಯ ಭೂಮಿ, ಕರ್ಮ ಭೂಮಿ, ಧರ್ಮ ಭೂಮಿ, ಪುಣ್ಯ ಭೂಮಿ ಹಾಗೂ ಮೋಕ್ಷ ಭೂಮಿ.

ನಮ್ಮ ಒಂದೊಂದು ಹಬ್ಬದ ಆಚರಣೆಯಲ್ಲೀ ತತ್ವಗಳ ಸಂದೇಶವಿದೆ. ಉದಾಹರಣೆಗೆ :

- ಕಷ್ಟ ಬಂದಾಗಲೀ, ಸುಖ ಬಂದಾಗಲೀ, ಧರ್ಮ ಮಾರ್ಗದ ವ್ರತದಿಂದ ವಿಚಲಿತರಾಗುವುದಿಲ್ಲ ಎಂಬ ದೀಕ್ಷೆ ತೆಗೆದುಕೊಳ್ಳುವ ದಿನವೇ ಯುಗಾದಿಯ ಬೇವು ಬೆಲ್ಲ ಮಿಶ್ರಣ.
- ಒಬ್ಬ ಸಾಮಾನ್ಯ ಮನುಷ್ಯ ತನ್ನ ಸದಾಚಾರ ಸದ್ಗುಣದಿಂದ ಎಂತಹ ಅಂತಃಶಕ್ತಿ ಬೆಳೆಸಿಕೊಳ್ಳಬಹುದೆಂಬ ಶ್ರೀರಾಮನ ಆದರ್ಶದ ಶ್ರೇಷ್ಠ ಸಂದೇಶ ಹೊತ್ತ ಶ್ರೀರಾಮ ನವಮಿ
- ಒಂದೇ ತಾಯಿಯ ಗರ್ಭದಲ್ಲಿ ಜನಿಸಿದ ನಾಗರ ಹಾವುಗಳು ಹಿಂದೆ ತಾವು ಚದುರಿ ಹೋಗಿದ್ದರೂ ಮತ್ತೆ ಆಕಸ್ಮಿಕವಾಗಿ ಸಂದಿಸುವ ಸಂದರ್ಭದಲ್ಲಿ ಆಹಾರಕ್ಕಾಗಿ ಅಥವಾ ಮತ್ತಾವುದೇ ಸಂಗತಿಗಾಗಿ ಪರಸ್ಪರ ಹೊಡೆದಾಡುವುದಾಗಲೀ, ದ್ವೇಷಿಸುವುದಾಗಲೀ ಮಾಡಲಾರವು ಎಂಬ ನೀತಿಯುಕ್ತ ಪ್ರಾಣಿಶಾಸ್ತ್ರದ ಹಿನ್ನಲೆ ನಮ್ಮ ಋಷಿಮುನಿಗಳಿಂದ ದೊರೆತುದೇ ನಾಗರ ಪಂಚಮಿಯಲ್ಲಿ ಒಡಹುಟ್ಟಿದವರು ಪರಸ್ಪರ ಪ್ರೀತಿಯಿಂದ ಭೇಟಿಯಾಗುವ ಶ್ರೇಷ್ಠ ಸಂದೇಶ.
- ಲೋಕ ಕಂಟಕರನ್ನು, ಅಧರ್ಮೀಯರನ್ನು, ಸ್ವಾರ್ಥಿಗಳನ್ನು ಸದೆಬಡಿದು ಸಮಾಜದ ಶುದ್ಧೀಕರಣ ಮಾಡಿ, ಸಾತ್ವಿಕರಿಗೆ ಸ್ಥಾನಮಾನ ಸಿಗುವಂತೆ ಮಾಡಿ, ಧರ್ಮ ಸಂಸ್ಥಾಪನೆ ಮಾಡಿದ ಅರಿವು ಮೂಡಿಸುವ ಶ್ರೀ ಕೃಷ್ಣ ಜನ್ಮಾಷ್ಟಮಿ.
- ಸರಳ ಸಜ್ಜನಿಕೆಯಿಂದ, ನಿಸ್ಪೃಹತೆಯಿಂದ, ಮನೆಯಲ್ಲಿ ದೈವೀ ವಾತಾವರಣ ನಿರ್ಮಿಸುತ್ತಿದ್ದ ಸದ್ಗೃಹಿಣಿಗೆ ಅಪಾರ ಸಂಪತ್ತು ನೀಡಿ ಅನುಗ್ರಹಿಸಿದ ಸಂದೇಶವೇ ಶ್ರೀ ವರಮಹಾಲಕ್ಷ್ಮೀ ಹಬ್ಬ.
- ವ್ರತ, ಉಪವಾಸ, ಸರಳತೆಯಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಂಡು ನೆಮ್ಮದಿಯುಕ್ತ ಬದುಕು ಸಾಗಿಸುವ ಸಂದೇಶ ಪರಮ ವೈರಾಗ್ಯಮೂರ್ತಿ ಶಿವನ ಆರಾಧನೆಯೇ ಶಿವರಾತ್ರಿ.
- ಕಾಮದಿಂದ ಗೆಲ್ಲಲಾಗದ ಶಿವನನ್ನು ತಪಸ್ಸಿನಿಂದ, ಅನನ್ಯ ಭಕ್ತಿಯಿಂದ ಒಲಿಸಿಕೊಂಡ ಮಹಾ ಪತಿವ್ರತೆ ಗಿರಿಜೆಯ ಆದರ್ಶವೇ ಸ್ವರ್ಣಗೌರಿ ಹಬ್ಬ.
- ಅಧರ್ಮಗಳಿಗೆ ವಿಘ್ನ ಉಂಟು ಮಾಡಿ ಧರ್ಮಾನುಯಾಯಿಗಳ ಸಾಧನೆಯ ಸಿದ್ಧಿಗೆ ವಿಘ್ನ ಬಾರದಂತೆ ಅನುಗ್ರಹಿಸುವ ಸಿದ್ಧಿವಿನಾಯಕ ವ್ರತ.
- ತಮೋ ಗುಣದಿಂದ ಕ್ರೋಧವಶರಾಗಿ ಸಾಧು ಸಜ್ಜನರನ್ನು ಹಿಂಸಿಸುತ್ತಿದ್ದ ದುರ್ಮಾರ್ಗಿ ದೈತ್ಯರನ್ನು ಸಂಹರಿಸಿದ ಪ್ರತೀಕವೇ ಶಕ್ತಿ ಆರಾಧನೆ ಶರನ್ನವರಾತ್ರಿ.
- ಹದಿನಾರು ಸಹಸ್ತ ಅಮಾಯಕ ಕುಲಸ್ತ್ರೀಯರನ್ನು ಅಪಹರಣ ಮಾಡಿ ಬಂಧನದಲ್ಲಿಟ್ಟು ಮೆರೆಯುತ್ತಿದ್ದ ನರಕಾಸುರನ ಅಸುರೀ ಶಕ್ತಿಯ ಅಂತ್ಯದ ಸಂದೇಶ ನರಕ ಚತುರ್ದಶಿ.
- ಮೂರು ಲೋಕಕ್ಕೆ ತಾನೇ ಒಡೆಯನೆಂದು ಬೀಗುತ್ತಿದ್ದ ಬಲಿಯನ್ನು ಪಾತಾಳಕ್ಕೆ ತಳ್ಳಿ, ತನಗಾಗಿ ಸರ್ವಸ್ವವನ್ನು ಸಮರ್ಪಿಸಿದ್ದಕ್ಕಾಗಿ ತಾನೇ ಬಲಿಚಕ್ರವರ್ತಿಯ ಅರಮನೆ ಕಾವಲುಗಾರನಾಗಿ ನಿಂತ ಭಗವಂತನ ಕರುಣೆಯ ಸಂದೇಶ ಬಲಿಪಾಡ್ಯಮಿ.

ಹೀಗೆ ವ್ಯಕ್ತಿ ತಾನು ಅಲ್ಪಜೀವಿಯಾದರೂ, ಅವಿನಾಶೀ ಪರಬ್ರಹ್ಮನಲ್ಲಿ ಸ್ನೇಹ ಬೆಳೆಸುವ ಕೊಂಡಿಯೇ ಈ ಹಬ್ಬದ ದಿನಗಳು, ಕ್ಷಣಗಳು. ಹಬ್ಬದ ಪವಿತ್ರ ಪರ್ವ ದಿನಗಳಲ್ಲಿ ಜ್ಞಾನಯುಕ್ತವಾಗಿ ಉತ್ಸವಾದಿಗಳ ಉದ್ದೇಶ, ಆಚರಣೆ, ಯತಾರ್ಥ ವಿಧಿ ವಿಧಾನ, ವ್ರತ ಮಹಿಮೆ ಯನ್ನು ಅರಿತು ಆಚರಿಸಿದಾಗ ನಮಗೆ ಅದರ ನಿಜವಾದ ಫಲ ಪ್ರಾಪ್ತಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಸರ್ವಧರ್ಮಾನ್ ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ
ಮೋಕ್ಷಯಿಷ್ಯಾಮಿ ಮಾ ಶುಚಃ ॥

ಸರ್ವಧರ್ಮಗಳನ್ನು ತ್ಯಜಿಸಿ ನನ್ನನ್ನು ಶರಣು ಹೋಗು; ನಾನು ನಿನ್ನನ್ನು ಸಕಲ ಪಾಪಗಳಿಂದಲೂ ಬಿಡುಗಡೆಗೊಳಿಸುವೆನು, ಶೋಕಿಸಬೇಡ ಎಂಬ ಗೀತಾ ಚಾರ್ಯನ ನುಡಿ ನಮಗೆ ಸದಾ ದಾರಿದೀಪವಾಗಬೇಕು.

**ಟಿ.ಎಸ್. ನಾಗರಾಜ ಉಪಾಧ್ಯಾಯ,**
ವಾಮಂಜೂರು

# ಶ್ರೀ ಶ್ರೀ ವಿಶ್ವಜ್ಞತೀರ್ಥ ಶ್ರೀಪಾದಂಗಳವರ ಆರಾಧನಾ ಮಹೋತ್ಸವ

ಶ್ರೀ ಶ್ರೀ ವಿಶ್ವಜ್ಞ ತೀರ್ಥ ಪಾದಂಗಳವರ ಆರಾಧನಾ ಮಹೋತ್ಸವವು ದಿನಾಂಕ 3.9.2016ನೇ ಶನಿವಾರ ಶ್ರೀ ಕೃಷ್ಣಪ್ರಜ್ಞ ಪ್ರತಿಷ್ಠಾನ ವತಿಯಿಂದ ವಿಶ್ವೇಶ್ವರಪುರಂನ ಡಯಗನಲ್ ರಸ್ತೆಯಲ್ಲಿರುವ ಸಭಾಂಗಣದಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಸಾಯಂಕಾಲ ಕಲಬುರುಗಿ ಗುರುರಾಜದಾಸರು ಮತ್ತು ಸಂಗಡಿಗರಿಂದ ದೇವರನಾಮಗಳ ಕಾರ್ಯಕ್ರಮ ನಡೆಯಿತು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಈ ಭಕ್ತಿಸಂಗೀತ ಭಾವುಕರಿಗೆ ರಸದೌತಣವಾಯಿತು. ವಿದ್ವಾನ್ ಭಂ ಗುರುರಾಜ ಆಚಾರ್ಯರಿಂದ ಸುಮಾರು ಒಂದೂವರೆ ಗಂಟೆಗಳ ಕಾಲ "ಭಾಗವತದಲ್ಲಿ ಭಗವಂತನ ಅವತಾರ ರೂಪಗಳು" ಎಂಬ ವಿಚಾರದಲ್ಲಿ ಅಮೋಘವಾದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಅಧಿಕ ಸಂಖ್ಯೆಯಲ್ಲಿ ಭಕ್ತಾಭಿಮಾನಿಗಳು ಪಾಲ್ಗೊಂಡ ಈ ಸಮಾರಂಭದಲ್ಲಿ ಪೂಜೆ, ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆಯ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಏರ್ಪಡಿಸಲಾಗಿತ್ತು. ಧಾರ್ಮಿಕ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಖ್ಯಾತ ಲೆಕ್ಕಪರಿಶೋಧಕ ಶ್ರೀ ವೇದವ್ಯಾಸ ಆಚಾರ್ಯರ ಶ್ರಮ ಅಭಿನಂದನೀಯ.

**ಶ್ರೀ ಶ್ರೀ ವಿಶ್ವಜ್ಞ ತೀರ್ಥರು :** ಉಡುಪಿಯ ಅಷ್ಠಮಠಗಳ ಪರಂಪರೆಯಲ್ಲಿ ಅನೇಕ ಯತಿಶ್ರೇಷ್ಠರು ಬಂದುಹೋಗಿದ್ದಾರೆ. ಅಂತಹವರಲ್ಲಿ ಶ್ರೀ ಶ್ರೀ ವಿಶ್ವಜ್ಞ ತೀರ್ಥರು ಒಬ್ಬರು. ಶ್ರೀ ಪೇಜಾವರಮಠದ ಅಧೋಕ್ಷಜ ತೀರ್ಥರ ಪರಂಪರೆಯಲ್ಲಿ 31ನೆಯ ಯತಿಗಳು ಶ್ರೀ ಶ್ರೀ ವಿಶ್ವಜ್ಞ ತೀರ್ಥರು. 19ನೆಯ ಶತಮಾನ ಕಂಡ ಪ್ರಖಾಂಡ ಯತಿ ಪುಂಗವರು. ಶ್ರೀ ಶ್ರೀ ವಿಶ್ವಮನೋಹರತೀರ್ಥರಿಂದ ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆ ಪಡೆದರು. ಮಹಾ ತತ್ವಜ್ಞಾನಿ, ವೇದಾಂತಿ ಸದಾ ಅಧ್ಯಯನಶೀಲ ಹಾಗೂ ತಪಸ್ವಿಗಳಾಗಿದ್ದು ಮಹಾ ವಿಭೂತಿ ಪುರುಷರಾಗಿದ್ದರು. ಈಗಿನ ಪಂಚಮ ಪರ್ಯಾಯ ಪೀಠಸ್ಥ ಶ್ರೀ ಶ್ರೀ ವಿಶ್ವೇಶತೀರ್ಥರ ಪರಮಗುರುಗಳು.

ಪುತ್ತೂರು ತಾಲೂಕಿನ ಸುಬ್ರಹ್ಮಣ್ಯ ಸಮೀಪದ ನಗರಿ ಎಂಬ ಗ್ರಾಮ ಶ್ರೀಗಳವರ ಜನ್ಮಸ್ಥಳ. ಶ್ರೀ ನಾರಾಯಣಾಚಾರ್ಯ ಹಾಗೂ ಶ್ರೀಮತಿ ಸರಸ್ವತಿ ಯವರು ಇವರ ಪೂರ್ವಾಶ್ರಮದ ತಂದೆ ತಾಯಿ ಯವರು. ತನ್ನ ಜೀವಿತಾವಧಿಯಲ್ಲಿ ಇಡೀ ಭಾರತದ ಸಕಲ ತೀರ್ಥಕ್ಷೇತ್ರಗಳನ್ನು ಕಾಲ್ನಡಿಗೆಯಲ್ಲೆ ಶಿಷ್ಯ ರೊಂದಿಗೆ ಸಂಚರಿಸಿ ದ್ವೈತ ತತ್ವ ಪ್ರಚಾರಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟರು. ಯಾವುದೇ ಧರ್ಮ ಭೇದವಿಲ್ಲದೆ ಪ್ರತಿಯೊಬ್ಬರನ್ನೂ ಅನುಗ್ರಹಿಸಿದ ಯತಿ ಶ್ರೇಷ್ಠರು. ಶ್ರೀಕೃಷ್ಣ ಮಂತ್ರದಿಂದ ತೆಂಗಿನಕಾಯಿಯನ್ನು ಮಂತ್ರಿಸಿಕೊಟ್ಟು ಅನೇಕರಿಗೆ ಸಂತಾನಭಾಗ್ಯವನ್ನು ಅನುಗ್ರಹಿಸಿದ ಪವಾಡಪುರುಷರು.

ಮಹಾನ್ ವಿಭೂತಿ ಪುರುಷ ಶ್ರೀಮದ್ ವಿಜಯಧ್ವಜ ತೀರ್ಥರು ಶ್ರೀಮದ್ ಭಾಗವತಕ್ಕೆ ಬರೆದ ಸಂಪೂರ್ಣ ವ್ಯಾಖ್ಯಾನವನ್ನು ತಳಸ್ಪರ್ಶ ಅಧ್ಯಯನ ನಡೆಸಿ ಅದನ್ನು ದೇಶದಾದ್ಯಂತ ಇತರರಿಗೆ ತಿಳಿಸಿ ಹೇಳಿದ ಮಹಾಯತಿಗಳು. ಭಾಗವತ ಸಪ್ತಾಹವನ್ನು ನಿರಾಹಾರವಾಗಿ ಏಳು ದಿನಗಳ ಕಾಲ ನಡೆಸಿದ ತಪಸ್ವಿಗಳು. ಪೂರ್ವಾಶ್ರಮದ ತಾಯಿಗೆ ಗಂಗಾಜಲದಿಂದ ಅಭಿಷೇಕ ಮಾಡಿ ಪ್ರದಕ್ಷಿಣೆ ಗೈದು ಸಾಷ್ಟಾಂಗ ವಂದಿಸಿದ ಪೀಠಾಧಿಪತಿಗಳು. ಇಂತಹ ವಿಶಿಷ್ಟ ವ್ಯಕ್ತಿತ್ವದ ಯತಿಶ್ರೇಷ್ಠರ ಸ್ಮರಣೆಯೇ ನಮ್ಮನ್ನು ಕಷ್ಟಕಾರ್ಪಣ್ಯದಿಂದ ದೂರ ಒಯ್ಯಬಲ್ಲದು ಎಂಬುದು ನಿರ್ವಿವಾದ.

## ನುಡಿ ಮುತ್ತು

ಜಗತ್ತನ್ನು ಬದಲಿಸಲು ನಮ್ಮಿಂದ ಸಾಧ್ಯವಿಲ್ಲ. ಪ್ರಯತ್ನಿಸಿದರೆ ಸ್ವಲ್ಪಮಟ್ಟಿಗೆ ನಮ್ಮನ್ನು ನಾವು ತಿದ್ದಿಕೊಳ್ಳಬಹುದು. ಎಲ್ಲರೂ ಆನಂದ ನೀಡುತ್ತಾರೆ. ಕೆಲವರು ತಮ್ಮ ಆಗಮನದಿಂದ ಮತ್ತು ಕೆಲವರು ತಮ್ಮ ನಿರ್ಗಮನದಿಂದ.

# ಶ್ರೀ ಶ್ರೀ ವಿದ್ಯಾಧೀಶ ಶ್ರೀಪಾದಂಗಳವರ ಆರಾಧನೆ

ದಿನಾಂಕ 2.7.2016ನೇ ಶನಿವಾರದಂದು ಶ್ರೀ ಕೃಷ್ಣಪ್ರಜ್ಞ ಪ್ರತಿಷ್ಠಾನದವರು ಉಡುಪಿಯ ಶ್ರೀ ಕೃಷ್ಣಾಪುರ ಮಠದ ಶ್ರೀ ಶ್ರೀ ವಿದ್ಯಾಧೀಶ ಶ್ರೀಪಾದಂಗಳವರ 135ನೆಯ ಆರಾಧನಾ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಸಿದರು. ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ಗುಂಡೋಪಂತರ ಬೀದಿಯಲ್ಲಿರುವ ಶ್ರೀಕೃಷ್ಣ ಮಂದಿರದ ಆವರಣದಲ್ಲಿರುವ ಶ್ರೀಶ್ರೀಗಳವರ ಮೂಲ ವೃಂದಾವನಕ್ಕೆ ವಿಶೇಷ ಪೂಜೆ, ಶ್ರೀಕೃಷ್ಣ ಮುಖ್ಯಪ್ರಾಣ ದೇವರಿಗೆ ಮಹಾಪೂಜೆ ಮತ್ತು ಯತಿಗಳಿಗೆ ಹಸ್ತೋದಕಗಳು ನಡೆದುವು.

ಸಂಜೆ 5 ಗಂಟೆಗೆ ವಿಶ್ವೇಶ್ವರಪುರಂನ ಡಯಗನಲ್ ರಸ್ತೆಯಲ್ಲಿರುವ ಶ್ರೀಕೃಷ್ಣ ಪ್ರಜ್ಞಾ ಪ್ರತಿಷ್ಠಾನ ಆವರಣದಲ್ಲಿ ವಿದ್ವಾನ್ ಪ್ರಶಾಂತಭಾರ್ಗವ ಮತ್ತು ಸಂಗಡಿಗರಿಂದ ದಾಸವಾಣಿ ಮತ್ತು ಭಜನೆ ಹಾಗೂ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಅಧ್ಯಾಪಕರಾದ ವಿದ್ವಾನ್ ಧನಂಜಯ ಆಚಾರ್ಯರಿಂದ ವಿದ್ಯಾಧೀಶ ಯತಿಸ್ಮೃತಿ ಮತ್ತು ಗಾಯತ್ರಿಯ ಮಹತ್ವದ ಬಗ್ಗೆ ಪ್ರವಚನಗಳು ನಡೆದುವು. ಅಂತೆಯೇ ಪೂಜೆ ಹಾಗೂ ಆಗಮಿಸಿದ ಭಕ್ತರಿಗೆ ಪ್ರಸಾದ ವಿನಿಯೋಗಗಳು ನಡೆದುವು. ಇಂತಹ ಅಪೂರ್ವ ಯತಿವರ್ಯರ ವಿಶಿಷ್ಟ ಕೊಡುಗೆಗಳನ್ನು ನೆನಪಿಸಿ ಕೊಡುವಂತಹ ಕಾರ್ಯಕ್ರಮ ವನ್ನು ಆಯೋಜಿಸಿದ ಸಿ ಎ ವೇದವ್ಯಾಸ ಆಚಾರ್ಯರು ಅಭಿನಂದನಾರ್ಹರು.

# ಶ್ರೀ ಕೃಷ್ಣ

ಶ್ರೀ ಕೃಷ್ಣ, ಗೋಪಾಲ ವಾಸುದೇವ
ಶ್ಯಾಮ, ಗಿರಿಧರ ದೇವದೇವ
ಚಂದ್ರನ ಬೆಳಕಿನ ಅಂದದ ವದನ
ಮಿನುಗುತ ತಾರೆಯ ಚಂದದ ನಯನ
ತಲೆಯಲಿ ನವಿಲಿನ ಸುಂದರ ಗರಿ
ಕಿರು ಬೆರಳಿನ ಗೋವರ್ಧನ ಗಿರಿ
ಬೆಣ್ಣೆ ಮೊಸರು ಕದ್ದ ಕಳ್ಳ
ಗೋಪಿಯರ ಮನಸು ಕದ್ದ ಮಳ್ಳ
ಕೊಳಲನು ನುಡಿಸಿ ಮೋಹಿಸಿದನು
ದುಷ್ಟರ ಹೊಡೆದು ವಧಿಸಿದನು

**– ಕು. ಅನನ್ಯ .ಎಸ್**
(4ನೇ ತರಗತಿ)


# Farmland Project

***At back water of KRS, Near Mysore.***

- Min buy 2gunta (2178 SFT) / 5 Gunta (5445 SFT)
- Ideal location for a Farmhouse and will never run shortage of Water.
- Organic Farming assistance, 24x7 security,& construction support if req.
- 15Kms from Mysore, clear legal title with report.
- Back water of KRS, a panoramic view
- KLR act amended in Sept 15, as non agriculturist can also buy the land.
- Loan / Installment facility available.
- An exclusive Brahmins Project, initiated by a Vedic Scholar.

*For more information please*
email: ullas.bhide@gmail.com

*For telephonic enquiry:*
**Ullas Bhat Bhide : 9845641876**
**Nayana Bhat Bhide : 9980335403**

**ಆರೋಗ್ಯ–ಕಾಳಜಿ – 1**

# ಉಪ್ಪು ಮತ್ತು ಆರೋಗ್ಯ

ಉಪ್ಪು, ಸೋಡಿಯಮ್ ಕ್ಲೋರೈಡ್, ದೇಹಕ್ಕೆ ಬೇಕಾದ ಲವಣಗಳಲ್ಲಿ ಅತಿ ಮುಖ್ಯ. ಇದು ದೇಹದಲ್ಲಿನ ದ್ರವ ಅಂಶವನ್ನು ನೋಡಿಕೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ದೇಹದಲ್ಲಿ ಉಪ್ಪಿನ ಅಂಶ ಕಡಿಮೆಯಾದರೆ. ತುಂಬಾ ಬೆವರಿದಾಗ, ವಾಂತಿ–ಭೇದಿ ಆದಾಗ, ನೀರು ಕುಡಿಯುವುದು ಕಡಿಮೆಯಾದಾಗ, ತಿನ್ನುವುದು ಕಡಿಮೆಯಾದಾಗ; ವ್ಯಕ್ತಿಗೆ ನಿಶಕ್ತಿ ಕಾಣಿಸಿಕೊಳ್ಳುತ್ತದೆ. ತುಂಬಾ ಮಂಕಾಗುತ್ತಾನೆ, ಕೈಕಾಲು ಸೋಲುತ್ತದೆ, ತಲೆ ತಿರುಗುತ್ತದೆ, ಯಾವ ಕೆಲಸವನ್ನು ಮಾಡಲು ಉತ್ಸಾಹ ಇರುವುದಿಲ್ಲ. ಬೆವರು ಕಡಿಮೆಯಾಗುತ್ತದೆ. ಅದೇ ರೀತಿಯಲ್ಲಿ ಉಪ್ಪಿನ ಅಂಶ ಜಾಸ್ತಿಯಾದರೆ, ಬಿ.ಪಿ. ಜಾಸ್ತಿ ಆಗುತ್ತದೆ. ಕೆಲವು ವ್ಯಕ್ತಿಗಳ ದೇಹದಲ್ಲಿ ಹೆಚ್ಚಿನ ಉಪ್ಪು ಶೇಖರಣೆಯಾಗಿ ಜೊತೆಗೆ ನೀರು ಕೂಡ ಶೇಖರಣೆಯಾಗುತ್ತದೆ. ಆದುದರಿಂದ ಬಿ.ಪಿ. ಜಾಸ್ತಿ ಆಗುತ್ತದೆ. ಅಂತಹ ವ್ಯಕ್ತಿಗಳು ಆಹಾರದಲ್ಲಿ ಉಪಯೋಗಿಸುವ ಉಪ್ಪು ಕಡಿಮೆ ಮಾಡಿದರೆ ಬಿ.ಪಿ. ಕಡಿಮೆ ಆಗುತ್ತದೆ. ಎಲ್ಲರಲ್ಲೂ ಈ ರೀತಿಯ ವ್ಯತಿರಿಕ್ತ ಕಾಣಿಸಿಕೊಳ್ಳುವುದಿಲ್ಲ. ಒಂದು ಚಮಚ ಉಪ್ಪಿನಲ್ಲಿ 2.3 ಗ್ರಾಂ ಸೋಡಿಯಂ ಇರುತ್ತದೆ. ಉಳಿದ 2.7 ಗ್ರಾಂ ಕ್ಲೋರೈಡ್ ಇರುತ್ತದೆ.

ಆಹಾರಕ್ಕೆ ಉಪ್ಪು ಸೇರಿಸುವುದು (ಬೆರೆಸುವುದು) ಮಾನವನ ಅಭ್ಯಾಸ ಬಲ. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಪ್ರಮಾಣದಲ್ಲಿ ಉಪ್ಪನ್ನು ಬರೆಸುತ್ತಾರೆ. ನಾವು ಉಪಯೋಗಿಸುವ ಉಪ್ಪಿನ ಪ್ರಮಾಣ ಬೇರೆ ದೇಶಗಳಿಗಿಂತ ಹೆಚ್ಚು. ಪಾಶ್ಚಾತ್ಯ ದೇಶಗಳಲ್ಲಿ ಉಪ್ಪಿನ ಬಳಕೆ ಬಹಳ ಕಡಿಮೆ. ಆದರೆ ಆಹಾರದ ಜೊತೆಗೆ ಸೇವಿಸುವ ಚಿಪ್ಸ್, ಕುರ್‌ಕುರೆ, ಬಿಸ್ಕತ್, ಪಿಜ್ಜಾ ಮುಂತಾದವುಗಳಲ್ಲಿ ಉಪ್ಪಿನ ಅಂಶ ಜಾಸ್ತಿ ಆಗಿರುತ್ತದೆ. ಒಬ್ಬ ವ್ಯಕ್ತಿಗೆ ಒಂದು ದಿವಸಕ್ಕೆ ಬೇಕಾಗುವ ಉಪ್ಪಿನ ಅಂಶ 5 ಗ್ರಾಂ ಮಾತ್ರ. ಇದು ನಾವು ಸೇವಿಸುವ ಅಕ್ಕಿ, ಬೇಳೆ, ತರಕಾರಿ, ಹಣ್ಣು, ನೀರು, ಹಾಲಿನಲ್ಲಿ ಬೆರೆತಿರುತ್ತದೆ. ಅದಲ್ಲದೆ ತಿಂಡಿ–ತಿನಿಸು ತಯಾರು ಮಾಡುವಾಗ ಉಪ್ಪನ್ನು ಬೆರೆಸಿರುತ್ತಾರೆ. ನಾವು ಪ್ರತಿನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳಿಂದ ಸುಮಾರು 10–15 ಗ್ರಾಂ ಉಪ್ಪು ನಮ್ಮ ದೇಹಕ್ಕೆ ಸೇರುತ್ತದೆ. ಆದುದರಿಂದ ಪ್ರತ್ಯೇಕ ಉಪ್ಪು ಅಥವಾ ಉಪ್ಪಿನ ಪದಾರ್ಥಗಳನ್ನು ಸೇವಿಸುವುದನ್ನು ನಿಲ್ಲಿಸಿದರೂ ದೇಹಕ್ಕೆ ತೊಂದರೆ ಆಗುವುದಿಲ್ಲ.


ತುಂಬಾ ಜಾಸ್ತಿ ಉಪ್ಪು ಇರುವ ಪದಾರ್ಥಗಳೆಂದರೆ, ಉಪ್ಪಿನಕಾಯಿ, ತಿಂಡಿ, ಹಪ್ಪಳ, ಸಂಡಿಗೆ, ಖಾರಾ ಸೇವು, ಕೋಡುಬಳೆ, ಚಕ್ಕುಲಿ, ನಿಪ್ಪಟ್ಟು, ಚಿಪ್ಸ್, ಕುರುಕುರೆ, ಉಪ್ಪಿನ ಬಿಸ್ಕತ್, ಕೆಚಪ್, ಡಬ್ಬಿಯಲ್ಲಿ ಶೇಖರಿಸುವ ತರಕಾರಿಗಳು, ರೆಡಿಮೇಡ್ ಸೂಪ್ ಪ್ಯಾಕೆಟ್, ಇತ್ಯಾದಿ. ಉಪ್ಪಿನ ಬದಲು ಹುಣಸೆಹಣ್ಣು, ಲಿಂಬೆಹಣ್ಣು, ಟೊಮೆಟೋ, ನೀರುಳ್ಳಿ ರುಚಿಗೋಸ್ಕರ ಸ್ವಾದ ಜಾಸ್ತಿ ಮಾಡಲು ಉಪಯೋಗಿಸಬಹುದು. ಮಾಮೂಲು ಉಪ್ಪಿನ ಬದಲು, ಕಿಡ್ನಿ ತೊಂದರೆ ಇಲ್ಲದಿದ್ದವರು, ಕಲ್ಲು ಉಪ್ಪು ಉಪಯೋಗಿಸಬಹುದು. ಇದರಲ್ಲಿ ಪೊಟಾಷಿಯಂ ಜಾಸ್ತಿ ಇರುತ್ತದೆ. ಸೋಡಿಯಂ ಕಡಿಮೆ ಇರುತ್ತದೆ. ರುಚಿ ಮಾತ್ರ ಒಂದೇ ತರಹ ಇರುತ್ತದೆ. ಕಿಡ್ನಿ ತೊಂದರೆ ಇರುವವರು ಪೊಟಾಷಿಯಂ ಜಾಸ್ತಿ ಉಪಯೋಗಿಸಬಾರದು.

(ಮತ್ತೊಂದು ಟಿಪ್ಸ್ ಮುಂದಿನ ಸಂಚಿಕೆಯಲ್ಲಿ)

**ಡಾ. ನಾಗೇಂದ್ರ ಹೆಬ್ಬಾರ್**

**ಶುಭಾಶಯ**

ಭೃಗುವಾಣಿಯ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ಹಾಗೂ ಎಲ್ಲಾ ಸದಸ್ಯ ಬಾಂಧವರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳು.


# ಬೃಂದಾವನ ಗೆಸ್ಟ್ ಹೌಸ್

# BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block, Bhuvaneshwari Nagar
BSK 3rd Stage, Bangalore - 560 085 E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

ಶುಭಾಶಯಗಳನ್ನು ಕೋರುವವರು

|| ಹರಿಃ ಓಂ ||



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತೀಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ನಾನು ಬರಮಾಡಿಕೊಂಡ ಭಾರತದ ಸ್ವಾತಂತ್ರ್ಯ

ನೂರ ಐವತ್ತು ವರ್ಷಗಳ ಅವಿರತ ಹೋರಾಟದ ನಂತರ ಭಾರತಕ್ಕೆ 1947ರಲ್ಲಿ ದೊರಕಿದ ಸ್ವಾತಂತ್ರ್ಯವನ್ನು ನನ್ನೂರು ಕೋಟೇಶ್ವರದಲ್ಲಿ ನಾನೂ ಬರಮಾಡಿ ಕೊಂಡಿದ್ದೆ. ಅಂದಿನ ದಿನಗಳಲ್ಲಿ ಸಾಧಾರಣ ಊರಾಗಿ ಕೋಟೇಶ್ವರ ಪರಿಗಣಿಸಲ್ಪಟ್ಟಿದ್ದರೂ – ಅತ್ಯಂತ ಪ್ರಾಚೀನ ಕೋಟಿ ಲಿಂಗೇಶ್ವರನ ದೇವಸ್ಥಾನದಿಂದಾಗಿ ಸಪ್ತ ಕ್ಷೇತ್ರಗಳಲ್ಲೊಂದಾಗಿತ್ತು. ಆ ದಿನಗಳಲ್ಲಿ ನಮ್ಮೂರಿಗೆ ವಿದ್ಯುತ್ ಬಂದಿರಲಿಲ್ಲ. ಪೇಟೆ ಬೀದಿಯಲ್ಲಿರುವ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ಅಳವಡಿಸಿದ ಡೈನಮೋದಿಂದಾಗಿ ದೇವಳದಲ್ಲಿ ವಿದ್ಯುತ್ ಬಳಕೆಗೊಂಡಿತ್ತು. ಸ್ವಾತಂತ್ರ್ಯ ಹೋರಾಟದ ಗುರಿಮುಟ್ಟುವ ದಿನಗಳಲ್ಲಿ ನೂತನ ಪಾಕಿಸ್ತಾನದ ರಚನೆಗಾಗಿ ಹಿಂದೂಗಳ ಕಗ್ಗೊಲೆ ವಾಯುವ್ಯ ಭಾರತದಲ್ಲಿ ನಡೆದಿತ್ತು.

ಅಂತೂ–ಕೊನೆಗೆ ಬ್ರಿಟನಿನ ಲೇಬರ್ ಪಕ್ಷದ ಸರ್ ಆಟ್ಲೆ ಪ್ರಧಾನಮಂತ್ರಿಯಾಗಿದ್ದಾಗ ಭಾರತಕ್ಕೆ ಸ್ವಾತಂತ್ರ್ಯದ ಘೋಷಣೆಯಾಯ್ತು. ನನಗಾಗ ಏಳು ವರ್ಷ. ನಮ್ಮ ತಂದೆ ಕೆ.ಪಿ.ನರಸಿಂಹಯ್ಯ ಸ್ವಾತಂತ್ರ್ಯ ಹೋರಾಟಗಾರ ರಾಗಿದ್ದರು. ನಮ್ಮೂರಿನ ವೆಂಕಟರಮಣಯ್ಯ ಸುಬ್ಬಣ್ಣ ಉಡುಪರು – ವಿ.ಕೆ.ಐತಾಳರು ಹೋರಾಟದಲ್ಲಿ ಭಾಗವಹಿಸಿ ಸೆರೆಮನೆಯ ಶಿಕ್ಷೆ ಅನುಭವಿಸಿದವರು.

ಭಾರತದ ಸ್ವಾತಂತ್ರ್ಯಾಚರಣೆಯ ದಿನವಾಗಿ 1947 ಆಗಸ್ಟ್ 15 ನಿಗದಿಗೊಳಿಸಲ್ಪಟ್ಟಿತ್ತು. ಸಂಪೂರ್ಣ ಕೋಟೇಶ್ವರ ಸ್ವಾತಂತ್ರ ಬರಮಾಡಿಕೊಳ್ಳಲು ಪ್ರತಿಯೊಂದು ಮನೆಯ ಮೇಲೂ ರಾಷ್ಟ್ರಧ್ವಜ ಹಾರಾಡುತ್ತಿತ್ತು. ಆಗಸ್ಟ್ 14ರ ರಾತ್ರಿ 10 ಗಂಟೆಯಲ್ಲಿ ಶ್ರಾವಣದ ಜಿಟಿ ಜಿಟಿ ಮಳೆಯಲ್ಲಿ ಶಾಲಾ ಮೈದಾನದಲ್ಲಿ ಸ್ವಾತಂತ್ರ್ಯಾಚರಣೆಗಾಗಿ ನಾವು ವಿದ್ಯಾರ್ಥಿಗಳು ಚಡಪಡಿಸುತ್ತಿದ್ದೆವು. ಆರಂಭದಲ್ಲಿ ಕೋಟೇಶ್ವರ ಪೇಟೆ ಮಧ್ಯವಿದ್ದ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ತಟ್ಟೆಯೊಂದರಲ್ಲಿ ರಾಷ್ಟ್ರಧ್ವಜವನ್ನಿರಿ ಸಿಕೊಂಡು – ಹೂವು ಮತ್ತು ಧ್ವಜಸ್ತಂಭದ ಮೇಲಿಡಲು ಶಿಖರವೊಂದನ್ನಿರಿಸಿ ಆ ದೇವಳದಲ್ಲಿ ಪೂಜೆಗೊಂಡ ನಂತರ ಬ್ಯಾಂಡು–ಬಾಜಾ–ಭಜಂತ್ರಿಯೊಡನೆ ವೆಂಕಟರಮಣಯ್ಯನವರ ನೇತೃತ್ವದಲ್ಲಿ ಹೊರಟ ಮೆರವಣಿಗೆ ರಥಬೀದಿಯ ಕೋಟಿಲಿಂಗೇಶ್ವರ ದೇವಸ್ಥಾನಕ್ಕೆ ಜಿಟಿಜಿಟಿ ಮಳೆಯಲ್ಲಿ ಬಂದೆವು – ಅಲ್ಲಿ ಧ್ವಜಪೂಜೆಯಾದ ನಂತರ ಮೆರವಣಿಗೆ ಸಾವಕಾಶವಾಗಿ ಕೋಟೇಶ್ವರ ಶಾಲಾಮೈದಾನದತ್ತ ತೆರಳಲಾರಂಭಿಸಿತು – ನಮ್ಮ ತಂದೆಯವರು ತಮ್ಮ ಮಳಿಗೆಯ ಮೇಲೆ ಉದ್ದದ ಗಳವೊಂದರ ಮೇಲೆ – ಸೈಕಲ್ ಚಕ್ರವೊಂದನ್ನು ಅಳವಡಿಸಿ – ಅದರ ಸುತ್ತ – ಸುಭಾಷ್‌ಚಂದ್ರ ಬೋಸ್, ಜವಹರಲಾಲ್ ನೆಹರೂ, ವಲ್ಲಭಭಾಯ್ ಪಟೇಲ್ ಹಾಗೂ ಮಹಾತ್ಮಗಾಂಧಿಯವರ ಫಲಕವನ್ನಿರಿಸಿ ದಾರವೊಂದರ ಮೂಲಕ ಅದನ್ನು ಕೆಳಗಿನಿಂದಲೇ ತಿರುಗಿಸುವಂತೆ ಮಾಡಿ ತಮ್ಮ ಪ್ರತಿಭೆ ಮೆರೆದಿದ್ದರು. ಊರ ಜನರ ಸಂಭ್ರಮದ ನಡುವೆ ಸಾಗಿದ ನಮ್ಮೂರ ಸ್ವಾತಂತ್ರ್ಯದ ಮೆರವಣಿಗೆ ಶಾಲಾ ಮೈದಾನ ತಲುಪಿತು. ಅಲ್ಲಿ ಎತ್ತರದ ಧ್ವಜಸ್ತಂಭಕ್ಕೆ ದಾರದ ಮೂಲಕ ಧ್ವಜವನ್ನು ಕಳುಹಿಸುವಾಗ ರಾತ್ರಿ 12 ಗಂಟೆ. ಅಲ್ಲಿ ಧ್ವಜವನ್ನರಳಿಸಿದ ನಂತರ ಊರ ಹಿರಿಯರಿಂದ ಸ್ವಾತಂತ್ರ ಹೋರಾಟದ ಕಥನದ ನುಡಿಕೇಳಿ ಸಂತಸ ಪಟ್ಟ ನಾವು ಊರವರು. ರಾಷ್ಟ್ರಗೀತೆಯನ್ನು ಹಾಡಿ ಸ್ವಾತಂತ್ರ್ಯವನ್ನು ಬರವಾಡಿಕೊಂಡೆವು. ಸಿಹಿ ಹಂಚಲಾಯಿತು.

ಮರುದಿವಸವನ್ನು ನಮ್ಮ ಶಾಲಾ ವಿದ್ಯಾರ್ಥಿಗಳನ್ನು ಮೆರವಣಿಗೆಯಲ್ಲಿ ಸ್ವಾತಂತ್ರ್ಯೋತ್ಸವ ರೂಪದಲ್ಲಿ ಸಾಲಾಗಿ ಬರುವಂತೆ ಮಾಡಿ – ಮಧ್ಯ ಮಧ್ಯ ಪಾನಕ್ – ಸಿಹಿತಿಂಡಿ – ಕೋಸಂಬ್ರಿ ಇತ್ಯಾದಿಯನ್ನು ಊರ ಹಿರಿಯರು ಹಂಚಿ ಸಂಭ್ರಮಿಸಿದರು. ಸ್ವಾತಂತ್ರ್ಯವೇನೆಂದು ತಿಳಿದುಕೊಳ್ಳ ಲಾರದ ನನ್ನ ವಯಸ್ಸಿನಲ್ಲಿ ನಡೆದ ಸ್ವಾತಂತ್ರ್ಯ ಬರಮಾಡಿ ಕೊಂಡ ಘಟನೆ ಅಚ್ಚಳಿಯದಂತೆ ನನ್ನ ಮನಸ್ಸಿನಲ್ಲಿ ಮುದ್ರೆಯನ್ನೊತ್ತಿತ್ತು. ಅಂದು ನಾವು ಕೂಗಿದ ಭಾರತ್ ಮಾತಾ ಕಿ ಜೈ ಮತ್ತು ವಂದೆ ಮಾತರಂ ಇಂದಿಗೂ ನನ್ನ ಕಿವಿಯಲ್ಲಿ ಮೊಳಗುತ್ತಲೇ ಇದೆ.

**ಕೋಟೇಶ್ವರ ಸೂರ್ಯನಾರಾಯಣರಾವ್**

**ಗಮನಿಸಿ**

**ಸದಸ್ಯರಿಗೆ ಸಂಬಂಧಿಸಿದ ಸುದ್ದಿ ಸಮಾಚಾರಗಳನ್ನು ಈ ಅಂಕಣದಲ್ಲಿ ಪ್ರಕಟಿಸಲು ಅಂಚೆ ಅಥವಾ ಇ-ಮೇಲ್ ಮೂಲಕ ಸಂಪಾದಕರಿಗೆ ಸಕಾಲದಲ್ಲಿ ತಲುಪಿಸಬೇಕಾಗಿ ವಿನಂತಿ. -ಸಂ.**

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management



No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in

# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |

## ಎಪಿಎಲ್ 2016 : ಎಂಟು ತಂಡಗಳು

| ಕ್ರ.ಸಂ. | ತಂಡದ ಬ್ರಾಂಡ್ ನೇಮ್ | ಪ್ರಾಯೋಜಕರು | ಐಕಾನ್ ಆಟಗಾರರು |
|---|---|---|---|
| 1. | ಐತಾಳ್ ಏಸಸ್ | ಶ್ರೀಮತಿ ಕಸ್ತೂರಿ ಐತಾಳ್ | ಶ್ರೇಯಸ್ ಹೊಳ್ಳ |
| 2. | ಸರಳಾಯ ಸ್ಮೇಷರ್ಸ್ | ಶ್ರೀ ಎಸ್.ಎನ್. ಶರತ್‌ಚಂದ್ರ | ಅಜಯ್ ವೈ.ರಾವ್ |
| 3. | ಬಾಗಿಲ್ತಾಯ, ಬ್ರಿಗೇಡ್ಸ್ | ಶ್ರೀ ಪಿ.ಎಸ್. ಬಾಗಿಲ್ತಾಯ | ಭರತ್ ಅಡಿಗ |
| 4. | ಸ್ಟೀಲ್ ಸ್ಟಾರ್ಸ್ | ಶ್ರೀ ಎಂ. ಭಾಸ್ಕರರಾವ್ | ಸುಧೀಂದ್ರರಾವ್ |
| 5. | ಮುಂಡ್ರುಪಾಡಿ ಸ್ಟಾಲ್‌ವಾರ್ಟ್ಸ್ | ಶ್ರೀ ಮೋಹನ್ ರಾವ್ .ಎಂ | ದೇವಿ ಪ್ರಸಾದ್ |
| 6. | ಆರ್.ಎಸ್. ವಾರಿಯರ್ಸ್ | ಶ್ರೀ ವೈ. ರಾಧಾಕೃಷ್ಣ | ದರ್ಶನ್‌ರಾವ್ |
| 7. | ಉಪಾಧ್ಯ ಯೂನಿಕಾರ್ನ್ಸ್ | ಶ್ರೀ ಬಿ. ರಾಮಚಂದ್ರ ಉಪಾಧ್ಯ | ಸಂದೀಪ್ ರಾವ್ |
| 8. | ಪಂಟರ್ಸ್ ಐಡಿಯಲ್ | ಶ್ರೀ ಪಿ.ಸಿ. ರಾವ್ | ವೈಶಾಖ್ ಭಾರ್ಗವ್ |

## ಮಹಿಳಾ ವಿಭಾಗದಿಂದ ಸಂಗೀತ ತರಗತಿ

ಆನಂದ ಬಳಗದ ಮಹಿಳಾ ವಿಭಾಗದ ನೇತೃತ್ವದಲ್ಲಿ ಕಳೆದ ಕೆಲವು ವರ್ಷಗಳಿಂದ ಸಂಗೀತ ಅಭ್ಯಾಸ ತರಗತಿ ನಡೆಯುತ್ತಿದ್ದು, ಇದು ಸ್ವಲ್ಪ ದಿನಗಳ ಮಟ್ಟಿಗೆ ಸ್ಥಗಿತವಾಗಿತ್ತು. ಇದೀಗ ಸಂಗೀತ ತರಗತಿ ಪುನಾರಂಭವಾಗಿದ್ದು, ಪ್ರತಿ ಶನಿವಾರ ಸಂಜೆ 3 ರಿಂದ 4.30ರವರೆಗೆ ಹೋಟೆಲ್ ಉಡ್‌ಲ್ಯಾಂಡ್ಸ್ ಆವರಣದಲ್ಲಿ ನಡೆಯಲಿದೆ. ಖ್ಯಾತ ಸಂಗೀತ ವಿದುಷಿ ವಿದ್ವಾನ್ ಗೀತಾ ವಸಂತ್‌ರವರ ಮಾರ್ಗದರ್ಶನದಲ್ಲಿ ನಡೆಯಲಿರುವ ಸಂಗೀತ ಕ್ಲಾಸ್‌ನಲ್ಲಿ ಆಸಕ್ತರು ಭಾಗವಹಿಸಿ, ಇದರ ಸದುಪಯೋಗ ಪಡೆಯುವಂತೆ ವಿನಂತಿಸಲಾಗಿದೆ.

## ಮಹಿಳಾ ವಿಭಾಗದ ನೇತೃತ್ವದಲ್ಲಿ ವಧು-ವರಾನ್ವೇಷಣೆ

**ಆನಂದ ಬಳಗದ ಮಹಿಳಾ ವಿಭಾಗದವರು ಕಳೆದ ಕೆಲವಾರು ವರ್ಷಗಳಿಂದ ಬಳಗದ ಸದಸ್ಯರ ಅನುಕೂಲಕ್ಕಾಗಿ ವಧು-ವರಾನ್ವೇಷಣೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರ ಪ್ರಯೋಜನವನ್ನು ಈಗಾಗಲೇ ನೂರಾರು ಸದಸ್ಯರು ಪಡೆದುಕೊಂಡಿರುವುದು ಸಂತಸದ ವಿಚಾರ. ಈ ಕಾರ್ಯಕ್ರಮವು ಮುಖ್ಯವಾಗಿ ಬಳಗದ ಸದಸ್ಯರು ಮತ್ತು ಅವರ ಸಂಬಂಧಿಕರಿಗೆ ಮೀಸಲಾಗಿದ್ದು ಪ್ರತಿ ಬುಧವಾರ ಮತ್ತು ಶನಿವಾರ ಅಪರಾಹ್ನ ಗಂಟೆ 2.30 ರಿಮದ 4.30ರ ವರೆಗೆ ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ವುಡ್‌ಲ್ಯಾಂಡ್ಸ್‌ನ ಆವರಣದಲ್ಲಿ ನಡೆಸಲಾಗುತ್ತಿದೆ.**

**ಮಹಿಳಾ ವಿಭಾಗದ ಕಾರ್ಯಕರ್ತೆಯರು ಸೇವಾ ಮನೋಭಾವದಿಂದ ಈ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆಯಿಂದ ನಡೆಸುತ್ತಿರುವುದು ಸದಸ್ಯರೆಲ್ಲರಿಗೂ ತಿಳಿದಿರುವ ವಿಚಾರ.**

**ಬಳಗದ ಸದಸ್ಯರು ನಿಗದಿತ ವೇಳೆಯಲ್ಲಿ ಆಗಮಿಸಿ ಈ ಯೋಜನೆಯ ಸದುಪಯೋಗವನ್ನು ಪಡೆಯುವುದರೊಂದಿಗೆ ನಮ್ಮೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.**

**ಹೆಚ್ಚಿನ ಮಾಹಿತಿಗಳಿಗಾಗಿ ದಯವಿಟ್ಟು ಈ ಕೆಳಗಿನವರನ್ನು ಸಂಪರ್ಕಿಸಬೇಕಾಗಿ ವಿನಂತಿಸುತ್ತೇವೆ**

**ಶ್ರೀಮತಿ ಗೀತಾ ಪಿ.ಆರ್.ರಾವ್**
**9945938411**

**ಶ್ರೀಮತಿ ಸುಧಾ ಎಂ.ರಾವ್**
**9901127738**

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

**HOTEL Sheethal**

**#32/12, Sheshadri Road,**
**Ananda Rao Circle,**
**Bangalore - 560 009**
**Ph : 41139560 - 64**
**Mobile : 98457 77381**



**Sheethal Residency**

**# 3/1, Old Sawar Lane, Sheshadri Road**
**Near Sangolli Rayanna Circle,**
**Bangalore - 560 009**
**Ph : 080 2234 3777 / 80 / 81**
**email : info@sheetalresidency.com**
**URL : www.sheetalresidency.com**

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

*With Best Compliments from :*

# MOOLA TOOLS LLP
# MOOLA TECHNOLOGIES (P) LIMITED
# ERKADI SYSTEMS

***Manufacturers of Ventilators, Monitors, Operation room equipments, Anaesthesia Machines and other equipments.***

# 109, Electronic City, 1st Phase, Hosur Road,
Bangalore - 560 100
Tel : 080 - 2852 2442, 2852 2443,
Fax : 080 - 2852 2441
***Email : sales@erkadi.com***

**K.V. Murthy Yerkadithaya**
Chairman

**K.Y. Ashok Murthy**
Managing Director

# ಸುದ್ದಿ ಸಂಗ್ರಹ

## ಶ್ರೀ ಅನಂತಕೃಷ್ಣ ಅಡಿಗಳ್‌ರವರಿಗೆ ತೌಳವ ಮಾಧ್ವರತ್ನ ಪ್ರಶಸ್ತಿ

★ ಬೆಂಗಳೂರು ನಗರದಲ್ಲಿ ಕಳೆದ ಹಲವಾರು ವರ್ಷಗಳಿಂದ ಧರ್ಮ ಕಾರ್ಯ ನಿರತರಾಗಿದ್ದು, ಜನಪ್ರಿಯ ಪುರೋಹಿತರಾಗಿರುವ ವೇದಮೂರ್ತಿ ಶ್ರೀ ಪುತ್ತಿಗೆ ಅನಂತಕೃಷ್ಣ ಅಡಿಗಳ್‌ರವರಿಗೆ ತೌಳವ ಮಾಧ್ವ ಒಕ್ಕೂಟದವರು ತೌಳವ ಮಾಧ್ವರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ನಗರದ ಶ್ರೀ ಗೋವರ್ಧನ ಗಿರಿಧಾರಿ ಕ್ಷೇತ್ರದಲ್ಲಿ ದಿನಾಂಕ 29.5.2016ರಂದು ನಡೆದ ಸಮಾರಂಭವೊಂದರಲ್ಲಿ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಈ ಪ್ರಶಸ್ತಿಯನ್ನು ಶ್ರೀ ಅಡಿಗಳ್‌ರವರಿಗೆ ನೀಡಿ ಆಶೀರ್ವದಿಸಿರುತ್ತಾರೆ. ಶ್ರೀಯುತ ಅಡಿಗಳ್‌ರವರ ಷಷ್ಠಬ್ದಿ ಸಮಾರಂಭವು ಇತ್ತೀಚೆಗೆ ಅವರ ಹುಟ್ಟೂರಾದ ಪುತ್ತಿಗೆಯ ಅಂಗಡಿಮಾರ್ ಮನೆಯಲ್ಲಿ ವಿದ್ಯುಕ್ತವಾಗಿ ಜರಗಿದೆ. ಶ್ರೀ ಅಡಿಗಳ್‌ರವರಿಗೆ ಅಭಿನಂದನೆಗಳು.

★ ಬಳಗದ ಸಕ್ರಿಯ ಸದಸ್ಯರಾಗಿರುವ ಶ್ರೀ ಪ್ರಕಾಶಭಟ್ ಎನ್. ಅವರ ನೇತೃತ್ವದ ಕ್ರಿಯೇಟೀವ್ ಡೀಸೆಲ್ ಸರ್ವಿಸಸ್ ಸಂಸ್ಥೆಯ ನೂತನ ಕಚೇರಿಯ ಉದ್ಘಾಟನಾ ಸಮಾರಂಭವು ದಿನಾಂಕ 2.10.2016ರಂದು ಹನುಮಂತನಗರದ 50ನೇ ಅಡಿ ರಸ್ತೆಯಲ್ಲಿರುವ ಸುಸಜ್ಜಿತ ಕಟ್ಟಡದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

* ಬಳಗದ ಕ್ರಿಯಾಶೀಲ ಸದಸ್ಯರಾದ ಶ್ರಿ ಗೋಪಾಲ ಕೃಷ್ಣ ಕುಂಜತ್ತಾಯ ಮತ್ತು ಶ್ರೀಮತಿ ಪ್ರವೀಣಾ ದಂಪತಿಗಳ ಪುತ್ರ ಚಿ. ಶುಶೃತ್ ಇವರ ಮದುವೆ ದಿನಾಂಕ 12.9.2016ರಂದು ಶ್ರೀ ಜಯರಾಮ್‌ರಾವ್ ದಂಪತಿಗಳ ಪುತ್ರಿ ಸೌ. ಸೌಮ್ಯ ಎಂಬ ವಧುವಿನೊಂದಿಗೆ ಎರ್ಮಾಳು ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ಅದ್ದೂರಿಯಿಂದ ನೆರವೇರಿದೆ. ಆ ಪ್ರಯುಕ್ತ ಆರತಕ್ಷತೆ ಕಾರ್ಯಕ್ರಮವು ದಿ. 15.9.2016ರಂದು ಬೆಂಗಳೂರಿನ ಹೋಟೆಲ್ ಅಜಂತಾದಲ್ಲಿ ಸಂಭ್ರಮದಿಂದ ನಡೆದಿರುತ್ತದೆ.

## ಕರಾವಳಿ ಯಕ್ಷಗಾನ ಕಲಾವಿದರ 32ನೇ ವಾರ್ಷಿಕೋತ್ಸವ

ಬೆಂಗಳೂರಿನ ಶ್ರೀ ಪಾವಂಜೆ ಶಿವರಾಮಭಟ್ಟರ ನೇತೃತ್ವದ ಕರಾವಳಿಯಕ್ಷಗಾನ ಕಲಾವಿದರು ಸಂಸ್ಥೆ ತನ್ನ 32ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ ಆಚರಿಸಿದರು. 2 ದಿವಸಗಳ ಆಚರಣೆಯಲ್ಲಿ ದೇವೇಂದ್ರ ಗರ್ವಭಂಗ ಯಕ್ಷಗಾನ ಅಭಿನಯಿಸಲ್ಪಟ್ಟರೆ ಎರಡನೇ ದಿವಸ ಸಾಹಿತಿ ಕೋಟೇಶ್ವರ ಸೂರ್ಯನಾರಾಯಣರಾವ್ ಅಧ್ಯಕ್ಷತೆಯ



ಸಭೆಯಲ್ಲಿ ಹಿರಿಯ ಕಲಾವಿದರಾದ ಶ್ರೀ ಪೆರುವೋಡಿ ನಾರಾಯಣಭಟ್ ಹಾಗೂ ಶ್ರೀ ಪದ್ಯಾಣ ಶಂಕರನಾರಾಯಣ ಭಟ್‌ರವರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಹಯಗ್ರೀವ ಆಚಾರ್ ಹಾಗೂ ಶ್ರೀ ಆರ್. ಕೆ. ಭಟ್ ಆಗಮಿಸಿದ್ದರು. 32 ವರ್ಷದಿಂದ ಯಕ್ಷಗಾನ ಸೇವೆಯಲ್ಲಿ ತೊಡಗಿಸಿಕೊಂಡ ಶ್ರೀ ಶಿವರಾಮಭಟ್‌ರವರ ಯಕ್ಷಗಾನ ಪ್ರೀತಿಯನ್ನು ಶ್ಲಾಘಿಸಲಾಯಿತು. ಈ ಸಂದರ್ಭದಲ್ಲಿ ಗಜೇಂದ್ರಮೋಕ್ಷ ಹಾಗೂ ಚೂಡಾಮಣಿಯೆಂಬ ಯಕ್ಷಗಾನ ಪ್ರಸಂಗವನ್ನು ಅಭಿನಯಿಸಲಾಯಿತು.

## ಶ್ರೀ ಬಿ.ಆರ್. ತಂತ್ರಿಯವರಿಗೆ 75ರ ಸಂಭ್ರಮ

ಆನಂದ ಬಳಗದ ಹಿರಿಯ ಸದಸ್ಯರಾದ ಶ್ರೀ ಬಿ.ಆರ್. ತಂತ್ರಿಯವರು 75 ವರ್ಷಗಳನ್ನು ಪೂರ್ತಿಗೊಳಿಸಿರುವ ಜೊತೆಗೆ ವೈವಾಹಿಕ ಜೀವನದಲ್ಲಿ 50 ವರ್ಷಗಳನ್ನು ದಾಟಿರುವ ಸುಸಂದರ್ಭದಲ್ಲಿ ಅವರ ಮಗ ಪ್ರಸಾದ ತಂತ್ರಿ ಮತ್ತು ಸೊಸೆ ಸೌ. ರಮ್ಯ ತಂತ್ರಿಯವರ ಉಸ್ತುವಾರಿಯಲ್ಲಿ

ಶ್ರೀ ಧನ್ವಂತರಿ ಹೋಮ ಮತ್ತು ಐಂದ್ರಿಯ ಹೋಮವನ್ನು ಬೆಂಗಳೂರಿನ ಎನ್.ಆರ್. ಕಾಲೋನಿಯ ಶ್ರೀ ಸುಬ್ರಮಣ್ಯ ಮಠದಲ್ಲಿ ದಿ. 13.8.2016ರಂದು ವಿದ್ಯುಕ್ತವಾಗಿ ನೆರವೇರಿದೆ. ಶ್ರೀ ಬಿ.ಆರ್. ತಂತ್ರಿಯವರಿಗೆ ಭಗವಂತ ದೀರ್ಘಾಯುಷ್ಯವನ್ನು ನೀಡಿ ಕರುಣಿಸಲಿ ಎಂದು ನಮ್ಮ ಹಾರೈಕೆ.

★ ಜನಪ್ರಿಯ ಪತ್ರಕರ್ತ ಹಾಗೂ ಅಗೋಚರ ಮಾಸಪತ್ರಿಕೆಯ ಸಂಪಾದಕ ಶ್ರೀ ಪಿ. ನಾಗೇಶ ಚಡಗ ದಂಪತಿಗಳ ದ್ವಿತೀಯ ಪುತ್ರಿ ಸೌ. ರಾಧಿಕಾ ಅವರ ವಿವಾಹ ಶ್ರೀ ನಾರಾಯಣ ಬಾಳೇಪುರ ದಂಪತಿಗಳ ಪುತ್ರ ಚಿ. ಕೀರ್ತಿ ಎಂಬ ವರನೊಡನೆ ದಿ. 8.9.2016ರಂದು ಬೆಂಗಳೂರಿನ ನಂದಗೋಕುಲ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಿಂದ ಜರಿಗಿದೆ ಆರತಕ್ಷತೆಯು ಅದೇ ಕಲ್ಯಾಣ ಮಂಟಪದಲ್ಲಿ 7.9.2016ರ ಸಂಜೆ ನೆರವೇರಿತ್ತು.

## ನೆಮ್ಮದಿ – ಹೊಸ ಕಟ್ಟಡಕ್ಕೆ ಶಿಲಾನ್ಯಾಸ

ನಗರದ ವಿದ್ಯಾಮಾನ್ಯನಗರದಲ್ಲಿ 2007ರಿಂದ ಕಾರ್ಯವೆಸಗುತ್ತಿದ್ದು ನೆಮ್ಮದಿ ವಿಶ್ರಾಂತಿಧಾಮ ಎಂಬ ವೃದ್ಧಾಶ್ರಮವನ್ನು ಪ್ರಾರಂಭಿಸಿ ಸುಮಾರು 65 ಹಿರಿಯ ನಾಗರಿಕರಿಗೆ ಆಶ್ರಯವನ್ನು ಒದಗಿಸುತ್ತಿರುವ ನೆಮ್ಮದಿ ಶ್ರೀ ಲಕ್ಷ್ಮೀ ನರಸಿಂಹ ಟ್ರಸ್ಟ್ (ರಿ)ಗೆ ದಿನಾಂಕ 26.8.2016 ಒಂದು ಮರೆಯಲಾಗದ ದಿನ. 2007ರಲ್ಲಿ ಇಬ್ಬರು ಹಿರಿಯ ನಾಗರಿಕರಿಗೆ ಆಶ್ರಯ ಒದಗಿಸುವ ಮೂಲಕ ಪ್ರಾರಂಭವಾದ ಈ ಕಾರ್ಯ ಇವತ್ತು ಹೆಮ್ಮರವಾಗಿ ನಿಂತು ಎರಡು ಕಟ್ಟಡಗಳಲ್ಲಿ ವಿಸ್ತರಿಸಿ ತನ್ನ ಮೂರನೆಯ ಕಟ್ಟಡಕ್ಕೆ ಶಿಲಾನ್ಯಾಸ ಗೈಯುವ ಮೂಲಕ ಹಿರಿಯರ ಸೇವೆಯಲ್ಲಿ ಒಂದು ದಾಪುಗಾಲನ್ನಿಟ್ಟಿದೆ.

ದಿನಾಂಕ 26.8.2016 ರಂದು ಪೂರ್ವಾಹ್ನ ನಡೆದ ಸರಳ ಸಮಾರಂಭದಲ್ಲಿ ಶಿಲಾನ್ಯಾಸಕ್ಕೆ ಸಂಬಂಧಪಟ್ಟ ಧಾರ್ಮಿಕ ಕಾರ್ಯಕ್ರಮಗಳ ಬಳಿಕ ನಡೆಸಿದ ಚಿಕ್ಕ ಚೊಕ್ಕ ಸಭಾ ಕಾರ್ಯಕ್ರಮದಲ್ಲಿ AMS ಸಂಸ್ಥೆಯ ಆಡಳಿತ ನಿರ್ದೇಶಕರಾದ ಶ್ರೀ ರಾಮದಾಸ್‌ರವರು ಮುಖ್ಯ ಅತಿಥಿಗಳಾಗಿ ಹಾಜರಿದ್ದರು. ಆಡಳಿತ ಟ್ರಸ್ಟ್ ಶ್ರೀ ಮುಕುಂದರಾವ್ ವಿಶ್ರಾಂತಿಧಾಮ ನಡೆದು ಬಂದ ದಾರಿ ಮತ್ತು ಮುಂದಿನ ಯೋಜನೆಗಳ ಬಗ್ಗೆ ಸ್ಥೂಲವಾಗಿ ವಿವರಿಸಿದರು.

ನೆಮ್ಮದಿ ವಿಶ್ರಾಂತಿಧಾಮವು ಕೇವಲ ಆಶ್ರಯ ಒದಗಿಸುವುದಲ್ಲದೆ ವೃದ್ಧಾಪ್ಯದಲ್ಲಿ ಅವಶ್ಯವಿರುವ ಮಾನಸಿಕ ನೆಮ್ಮದಿಯನ್ನು ನೀಡುವ ದಿಸೆಯಲ್ಲಿ ಯೋಗಾಭ್ಯಾಸ, ಧ್ಯಾನ, ಪ್ರಾಣಾಯಾಮ ಭಜನೆ ಆರೋಗ್ಯ ತಪಾಸಣೆಗಳನ್ನು ಏರ್ಪಡಿಸುತ್ತಾ ಒದಗಿಸುವ ಆಹಾರಗಳ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸುತ್ತಾ ಬಂದಿದೆ. ಸಭಾ ಕಾರ್ಯಕ್ರಮಗಳ ನಿರ್ವಹಣೆಯನ್ನು ಹರಿದಾಸ ಉಪಾಧ್ಯರವರು ಮಾಡಿದರೆ ಶ್ರೀಯುತ ಸುಬ್ರಹ್ಮಣ್ಯರವರು ಸಹಕರಿಸಿದ ಸರ್ವರಿಗೂ ಧನ್ಯವಾದ ಸಮರ್ಪಿಸಿದರು.

## ಡಾ. ಪುತ್ತೂರಾಯರಿಂದ ಮಾತಿನ ಮಂಟಪ

ಉಡುಪಿ ಶ್ರೀ ಕೃಷ್ಣಮಠದ ರಾಜಾಂಗಣದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮೀ ಪ್ರಯುಕ್ತ ದಿ. 25.8.2016ರಂದು ನಡೆದ ಬೃಹತ್ ಧಾರ್ಮಿಕ ಸಮಾವೇಶದಲ್ಲಿ ಡಾ. ಕೆ.ಪಿ. ಪುತ್ತೂರಾಯರು 'ಕೃಷ್ಣನ ಸಂದೇಶ' ಎಂಬ ಮಾತಿನ ಮಂಟಪವನ್ನು ರಚಿಸಿ, ಸಭಿಕರ ಮೂಲಕ ಶ್ರೀ ಕೃಷ್ಣನಿಗೆ ಸಮರ್ಪಿಸಿದರು. ಸುಮಾರು ಒಂದು ತಾಸು ಕಾಲ ಶ್ರೀಯುತರು ನೀಡಿದ ಉಪನ್ಯಾಸ ಜನ ಮೆಚ್ಚುಗೆಯನ್ನು ಪಡೆದದ್ದೇ ಮಾತ್ರವಲ್ಲ. ಸಭೆಯ ಸಾನಿಧ್ಯ ವಹಿಸಿದ್ದ ಪರ್ಯಾಯ ಮಠಾಧೀಶ, ಶ್ರೀ ಶ್ರೀ ಪೇಜಾವರ ಶ್ರೀಗಳು ಪುತ್ತೂರಾಯರನ್ನು ಕುರಿತು, ಇವರು ಮಾತಿನ ಮುತ್ತೂರಾಯರು ಎಂದು ಶ್ಲಾಘಿಸಿ, ಆಶೀರ್ವದಿಸಿದರು.

## ಶ್ರೀ ಕೋಟೇಶ್ವರ ಅವರಿಂದ ಮೇಜುಗಳ ಕೊಡುಗೆ

ಬೆಂಗಳೂರು ನಗರದ ಎನ್.ಆರ್. ಕಾಲನಿಯಲ್ಲಿರುವ ಶ್ರೀ ಸುಬ್ರಮಣ್ಯಮಠಕ್ಕೆ 10 ಸ್ಟೈನ್‌ಲೆಸ್ ಮೇಜುಗಳನ್ನು ಖ್ಯಾತ ಸಮಾಜಸೇವಕ ಮತ್ತು ಸಾಹಿತಿ ಶ್ರೀ ಕೋಟೇಶ್ವರ ಸೂರ್ಯ ನಾರಾಯಣ ರಾವ್‌ರವರು ಕೊಡುಗೆ ನೀಡಿದ್ದು, ಇದಕ್ಕಾಗಿ ಸುಬ್ರಮಣ್ಯ ಮಠಾಧೀಶರು ಶ್ರೀ ಸೂರ್ಯನಾರಾಯಣ ದಂಪತಿಗಳನ್ನು ಆಶೀರ್ವದಿಸಿದರು.

## ಡಾ. ಪುತ್ತೂರಾಯರಿಗೆ ಪ್ರಶಸ್ತಿಗಳು



ಎಸೋಸಿಯೇಶನ್ ಆಫ್ ಫಿಸಿಯೋಲಜಿಸ್ಟ್ ಮತ್ತು ಫಾರ್ಮಕಾಲಜಿಸ್ಟ್ ಆಫ್ ಇಂಡಿಯಾದವರು ನೀಡುವ ಪ್ರತಿಷ್ಠಿತ ಜೀವಮಾನದ ಸಾಧನೆಗಾಗಿ ನೀಡುವ ಈ ವರ್ಷದ ಪ್ರಶಸ್ತಿಯನ್ನು ಡಾ.ಕೆ.ಪಿ. ಪುತ್ತೂರಾಯ ರವರು ಪಡೆದಿದ್ದು, ಈ ಪ್ರಶಸ್ತಿಯನ್ನು ದಿನಾಂಕ 22.10.2016 ರಂದು ಪಾಟ್ನಾ ಮೆಡಿಕಲ್ ಕಾಲೇಜಿನಲ್ಲಿ ಬಿಹಾರದ ಘನತೆವೆತ್ತ ರಾಜ್ಯಪಾಲರು ಪ್ರದಾನ ಮಾಡಿದ್ದಾರೆ.

ಡಾ. ಪುತ್ತೂರಾಯರಿಗೆ ದಕ್ಷಿಣ ಕನ್ನಡಿಗರ ಸಂಘವು ದಿನಾಂಕ 25.9.2016ರಂದು ಈ ಕರಾವಳಿ ರತ್ನ ಪ್ರಶಸ್ತಿಯನ್ನು ನೀಡಿದ್ದು, ಈ ಎರಡು ಪ್ರಶಸ್ತಿಗಳಿಗೆ ಪಾತ್ರರಾಗಿರುವ ಶ್ರೀಯುತರಿಗೆ ಅಭಿನಂದನೆಗಳು.

## ಬೇಳೂರು ಬಾಯರ್ಸ್‌ಗೆ ಪ್ರಶಸ್ತಿಯ ಗರಿ

ಎಸೋಚೆಮ್ ಇಂಡಿಯಾದವರು ಪ್ರತಿವರ್ಷ ನೀಡುವ ರಾಷ್ಟ್ರೀಯ ಮಟ್ಟದ 'ನ್ಯೂಟ್ರಾ ಸ್ಯುಟಿಕಲ್ ಕಂಪೆನಿ ಆಫ್ ದಿ ಈಯರ್' ಪ್ರಶಸ್ತಿಯನ್ನು ಈ ವರ್ಷ ಬೇಳೂರು ಬಾಯರ್ಸ್ ಬಯೋಟೆಕ್ ಕಂಪೆನಿ ಪಡೆದಿರುವುದು ಬಳಗಕ್ಕೆ ಹೆಮ್ಮೆಯ ಸಂಗತಿ. ಆಯುರ್ವೇದ ಔಷಧಗಳು ಮತ್ತು ಪರ್ಯಾಯ ಪೌಷ್ಠಿಕ ಉತ್ಪನ್ನಗಳ ಉತ್ಪಾದನೆಯಲ್ಲಿ ಮಾಡಿರುವ ಗಣನೀಯ ಸಾಧನೆಯನ್ನು ಗುರುತಿಸಿ, ನೀಡಲಾದ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಜಿ. ಬಾಯಿರಿಯವರು ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಸ್ವೀಕರಿಸಿದ್ದಾರೆ. ಶ್ರೀ ಬಾಯಿರಿ ಮತ್ತು ಅವರ ಸಂಸ್ಥೆಗೆ ಅಭಿನಂದನೆಗಳು.


## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 1700 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ-ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಒಟ್ಟಾರೆ ಓದುಗರ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯಾದ ಮಾಧ್ಯಮ.

**ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ)**

| | | |
|---|---|---|
| 2, 3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ. 3000/– |
| ಬಹುವರ್ಣ – ಒಳಪುಟ | : | ರೂ. 2000/– |
| ಕಪ್ಪು ಬಿಳುಪು – ಒಳಪುಟ | : | ರೂ. 1500/– |
| ಅರ್ಧಪುಟ | : | ರೂ. 750/– |
| ಕಾಲುಪುಟ | : | ರೂ. 400/– |

ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**
ಕೋಶಾಧಿಕಾರಿ, ಆನಂದಬಳಗ
ದೂರವಾಣಿ : 98440 5881
E-mail : yrk1093@rediffmail.com

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳನ್ನು ಕೋರುವವರು :



## ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ
ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು,
ಉತ್ತಮ ದಾವಣಿ, ಮಗುಟ, ಮಡಿಪಂಚೆ,
ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು,
ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.

ಸ್ಥಾಪಕರು : ಶ್ರೀ ಟಿ. ಆರ್. ಕೇಕುಡ

ಶುಭಾಶಯಗಳನ್ನು ಕೋರುವವರು :

## ಎಂ.ಜಿ.ಎಸ್‌ಕೆ. ವಧು ವರಾನ್ವೇಷಣಾ ಕೇಂದ್ರ

(ಅಖಿಲಾ ಕರ್ನಾಟಕ ಬ್ರಾಹ್ಮಣ ಸಭಾದ ಅಂಗ ಸಂಸ್ಥೆ)

ಈ ಸಂಸ್ಥೆಯು ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಹೆಚ್ಚು ವಧೂವರರ ಮುಖಾಮುಖಿ ಸಮಾವೇಶಗಳನ್ನು ವ್ಯವಸ್ಥೆಗೊಳಿಸಿ, ಸಾವಿರಕ್ಕೂ ಹೆಚ್ಚು ವಿವಾಹಗಳಿಗೆ ಕಾರಣೀಭೂತವಾಗಿದೆ. ವಿಧವೆಯರು, ಅಂಗವಿಕಲರು, ವಿಚ್ಛೇದಿತರು, ವಯೋಮಿತಿ ಮೀರಿದವರಿಗೆ ವಿಶೇಷ ಗಮನ ನೀಡಲಾಗುವುದು.

### ಕ್ಷೇಮ ಮಹಿಳಾ ವಸತಿ ನಿಲಯ

ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸುಸಜ್ಜಿತವಾದ, ಸುಭದ್ರವಾದ ಸಸ್ಯಾಹಾರೀ ಊಟ ವಸತಿಗಳನ್ನು ಮಿತವ್ಯಯದಲ್ಲಿ ಒದಗಿಸಲಾಗುವುದು.

ಹೆಚ್ಚಿನ ವಿವರಗಳಿಗೆ : ಸುಮಂಗಲಾ ಎಸ್. ಆಚಾರ್
ದೂರವಾಣಿ : 26791217, 26710797, 9844320328

ಸೋಮೇಶ್ವರ 3799, 13ನೇ ಕ್ರಾಸ್, ಬನಶಂಕರಿ 2ನೇ ಹಂತ
(ಇಂದಿರಾ ನರ್ಸಿಂಗ್ ಹೋಂ ಬಸ್‌ಸ್ಟಾಪ್ ಹತ್ತಿರ) ಬೆಂಗಳೂರು - 70

ಶುಭಾಶಯಗಳೊಡನೆ,

## ಕೋಟೇಶ್ವರ ಸೂರ್ಯನಾರಾಯಣ ರಾವ್

ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.
ಅಧ್ಯಕ್ಷರು

ಉದ್ಯಮ :

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# Trade Vision India Pvt Ltd

(Road Furnishing Division)



**Leaders in providing Turnkey based complete start-to-end safety solutions for Medium & Mega Sized National Highway projects, Railway projects, Urban Condominiums, Industrial & SEZ Campuses.**

## Expertise:

Thermoplastic Road Marking
Overhead Gantry, Cantilever & Cautionary Signage
Metal Crash Barriers
Car Parking Traffic Solutions
Solar Traffic Light & Signals

## With Best Compliments from
## Ashwin Polali Ramesh

Add: #7, 17th Cross, Off Margosa Road, Malleshwaram, Bangalore-560055. Phone: 080-23449516/17, Web: www.tradevisionindia.com

# Focus Infra Engineering India Pvt Ltd

(Lubrication Division)



**Indian Channel Partner for PETRON USA**

**Importers & Sole Distributor for PETRON make SPECIALITY LUBRICANTS used for Open Girth Gear System in Steel, Cement, Mining, Agro & Paper Industries.**

## With Best Compliments from
## Ashwin Polali Ramesh

Add: #7, 17th Cross, Off Margosa Road, Malleshwaram, Bangalore-560055. Phone: 080-23449516/17, Web: www.tradevisionindia.com

Bhruguvani (September 2016) Regd. with RNI under No.KARKAN/2012/45587 No. of pages : 40 (36+4)




If undelivered please return to:
**Ananda Balaga**
Jeevana Buildings, 2nd Floor
11, Kumara Park East, Bengaluru - 560 001

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02